

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 06 Issue : 266 Sunday 30-06-2024 E-mail : maruti.b.hosamani76@gmail.com Page: 4 Price : Rs. 1/-


## ಸತತ ಓದು ಯಶಸ್ವಿಗೆ ಮೆಟ್ಟಿಲು: ಡಾ. ರಾಜಶೇಖರ ದಾನರಡ್ಡಿ



**ಹೊಳೆಆಲೂರ** : ವರ್ಷದುದ್ದಕ್ಕೂ ಆಟ-ಊಟ ವಿವಿಧ ಸ್ಪರ್ಧೆಗಳಲ್ಲಿ ನಿಮ್ಮ ಪ್ರತಿಭೆ ತೋರಿದಂತೆ ಇನ್ನು ಅಭ್ಯಾಸದತ್ತ ಗಮನ ಹರಿಸಿ. ಸತತ ಓದು ಯಶಸ್ಸಿನ ಮೆಟ್ಟಿಲು ಎಂದು ಗದಗ ನಗರದ ಪಿ.ಪಿ.ಜಿ ಕಲಾ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ರಾಜಶೇಖರ ದಾನರಡ್ಡಿ ಹೇಳಿದರು.

ಅವರು ಹೊಳೆಆಲೂರಿನ ಶ್ರೀ ಕವಿಪ್ರ ಸಮಿತಿಯ ಕಲಾ,ವಿಜ್ಞಾನ, ವಾಣಿಜ್ಯ ಮಹಾ ವಿದ್ಯಾಲಯ ಹಾಗೂ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪಠ್ಯೇತರ ಚಟುವಟಿಕೆಗಳ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು. ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಮುಖ್ಯವಾಗಿದ್ದು ನಮ್ಮ ಪ್ರತಿಭೆಗಳನ್ನು ಬೆಳಕಿಗೆ ತರಲು ವಿವಿಧ ವಿಭಾಗಗಳು ಇರುತ್ತವೆ. ಅವುಗಳ ಮೂಲಕ ವೇದಿಕೆಯನ್ನು ನೀವು ಸದುಪಯೋಗ ಪಡಿಸಿ ಕೊಂಡಿದ್ದಿರಿ. ಓದಿಗೆ ದೈಹಿಕ ಆರೋಗ್ಯ ಅಗತ್ಯ. ಹಾಗಾಗಿ ಆರೋಗ್ಯದಕಾಳಜಿನಿಮಗಿರಲಿ.ಪರೀಕ್ಷೆನಿಮ್ಮ ಭವಿಷ್ಯದ ಜೀವನ ರೂಪಿಸುವಲ್ಲಿ ಕಾರಣ ಆಗುವದರಿಂದ ಇನ್ನು ಹೆಚ್ಚು ಓದಿನ ಕಡೆ ಗಮನ ಹರಿಸಿ. ಪ್ರಯತ್ನವಿದ್ದಲ್ಲಿ ಫಲ ತಾನೇ ಸಿಗುತ್ತದೆ ಎಂದು ಹಲವರು ಯಶಸ್ಸಿನ ಸಾಧನೆ ಶಿಖರ ಏರಿದ ಉದಾಹರಣೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಡಾ.ರಾಜಶೇಖರ ದಾನರಡ್ಡಿಯವರನ್ನು ಮಹಾ ವಿದ್ಯಾಲಯದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಅತಿಥಿಗಳಾಗಿ ಆಗಮಿಸಿದ್ದ ಕವಿಪ್ರ ಸಮಿತಿ ನಿರ್ದೇಶಕರಾದ ಡಿ.ಎಸ್.ಶೆಲ್ಲಿಕೇರಿ ಮಾತನಾಡಿ ವಿದ್ಯಾರ್ಥಿಗಳು ವೇಳೆಯನ್ನು ವ್ಯರ್ಥ ಮಾಡದೆ ಓದಿನ ಕಡೆ ಲಕ್ಷ ಕೊಟ್ಟು ಸಂಸ್ಥೆಗೆ ಹೆಸರು ತನ್ನಿ ಎಂದು ಸಂದರ್ಭೋಚಿತ ಮಾತನಾಡಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಪ್ರಭು ಗಂಜಿಹಾಳ ವಹಿಸಿದ್ದರು. ವೇದಿಕೆಯಲ್ಲಿ ಕವಿಪ್ರ ಸಮಿತಿ ನಿರ್ದೇಶಕರಾದ ಜಿ.ಆರ್. ಕಂಬಿ,ಐಕ್ಯೂ ಎಸಿ ಕೋ-ಆರ್ಡಿನೇಟರ್ ಡಾ.ಎಸ್.ಬಿ.ಸಜ್ಜನರ್, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ, ಎನ್ ಎಸ್ ಎಸ್ ಯೋಜನಾಧಿಕಾರಿ ಪ್ರೊ.ವಿಶ್ವನಾಥ .ಪಾಟೀಲ, ಮಹಾವಿದ್ಯಾಲಯದ ಪ್ರಧಾನ ಕಾರ್ಯದರ್ಶಿ ರವಿಚಂದ್ರ ಕುರಿ, ಮಹಿಳಾ ಪ್ರತಿನಿಧಿ ಅನಿತಾ ಅಂಗಡಕಿ ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಪೂಜಾ ಬೆಳವಲ, ಅಕ್ಷತಾ ಮಣ್ಣೂರ ಮಾಡಿದರೆ , ವಿವಿಧ ಸ್ಪರ್ಧೆಗಳ ವಿಜೇತರ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಪ್ರೊ.ರೇಶ್ಮಾ ಟೆಕ್ಕೇದ ನಡೆಸಿಕೊಟ್ಟರು. ಸ್ವಾಗತವನ್ನು ಮಧು ಗಾಣಿಗೇರ ಮಾಡಿದರು. ಕೊನೆಯಲ್ಲಿ ಮಹಾದೇವಿ ಗೋಲಗೌಡ್ರ ವಂದಿಸಿದರು. ಮಧು ತಳವಾರ ನಿರೂಪಿಸಿದರು. ಸ್ನಾತಕೋತ್ತರ ಕನ್ನಡ ವಿಭಾಗದ ಸಂಯೋಜನಾಧಿಕಾರಿ ಪ್ರೊ.ಎಂ.ಎಸ್.ಬೇವೂರ, ಪ್ರೊ.ಎನ್. ಆರ್.ಹಿರೇಸಕ್ಕಗೌಡರ, ಪ್ರೊ.ಎಸ್. ವಾಯ್.ಪೂಜಾರ್, ಡಾ.ಕುಮಾರ ಹಂಜಗಿ, ಪ್ರೊ.ಎಂ.ಎಸ್.ಹೊನವಾಡ, ಪ್ರೊ.ಕೆ.ಎ.ಕೊಪ್ಪದ, ಪ್ರೊ.ಎಸ್.ಬಿ.ಹಳ್ಳೂರ, ಪ್ರೊ.ಶಿಲ್ಪಾ ಮೆದನಾಪೂರ, ಪ್ರೊ.ವಿನೋದ ಕಪ್ಪಲಿ, ಪ್ರೊ.ವಿ.ಬಿ.ಜಾಲಿಹಾಳ, ಪ್ರೊ. ಆನಂದ ಕೆಂಚನಗೌಡರ, ಪ್ರೊ.ಎಸ್.ಪಿ. ಗಡಗಿ, ಎಸ್.ಜಿ.ಮಾಳವಾಡ, ಮಹಾ ವಿದ್ಯಾಲಯದಸಿಬ್ಬಂದಿವರ್ಗವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ತೆರೆದ ಮನೆ ಕಾರ್ಯಕ್ರಮ ದಡಿ ವಿದ್ಯಾರ್ಥಿಗಳಿಗೆ ಆತ್ಮ ಸ್ಥೈರ್ಯ ತುಂಬಿದ: ಪಿಎಸ್‌ಐ ಗೀತಾಂಜಲಿ ಶಿಂಧೆ



**ಕೊಟ್ಟೂರು** : ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದ ಶುಕ್ರವಾರ ರಂದು ಬಾಲಕಿಯರ ಪ್ರೌಢ ಶಾಲೆಯ ಮಕ್ಕಳು "ತೆರೆದ ಮನೆ" ಯದ ಕೊಟ್ಟೂರು ಪೊಲೀಸ್ ಠಾಣೆಗೆ ಶಾಲೆಯ ದೈಹಿಕ ಶಿಕ್ಷಕರಾದ ಕೊಟ್ರಮ್ಮ ಶಿಕ್ಷಕರು ಠಾಣೆಗೆ ಮಕ್ಕಳೊಂದಿಗೆ ಭೇಟಿ ನೀಡಿ ಠಾಣೆಯ ಪೊಲೀಸ್ ಪೇದೆ ತೆರೆದ ಮನೆಗೆ ಬಂದ ಮಕ್ಕಳಿಗೆ ಠಾಣೆಯ ಒಳಗಡೆ ಯಾವ ರೀತಿಯಾಗಿ ಇರುತ್ತದೆ ಎನ್ನುವುದನ್ನು ವೀಕ್ಷಣೆಗೆ ಮಕ್ಕಳ ತೋರಿಸುವುದರ ಮೂಲಕ ಹಾಗೂ ಪೊಲೀಸ್ ರ ಕೈಯಲ್ಲಿರುವ ರೈಪಲ್ ಬಗ್ಗೆ ಬಂದಿರುವಂತ ಮಕ್ಕಳಿಗೆ ಸಂಪೂರ್ಣ ಮಾಹಿತಿ ನೀಡಿದರು ಮತ್ತು ಪೊಲೀಸ್ ರವರ ಕೈಯಲ್ಲಿರುವ ವಾಕೀಟಾಕ್ ಬಗ್ಗೆನೂ ಮಾಹಿತಿ ನೀಡಿದರು. ಹಾಗೆ ಈ ಸಂದರ್ಭದಲ್ಲಿ ಕೊಟ್ಟೂರು ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ರಾದ ಗೀತಾಂಜಲಿ ಶಿಂದೆ ರವರು ಮಕ್ಕಳಿಗೆ ಪೊಲೀಸ್ ಸ್ಟೇಷನ್ ನ ಕೆಲವು ಮೇಲಾಧಿಕಾರಿಗಳ ಪೋಸ್ಟ್ ಗಳನ್ನೂ ತಿಳಿಸುವುದರೊಂದಿಗೆ ಎಮರ್ಜೆನ್ಸಿ ಕಾಲ್ 112 ಬಗ್ಗೆ ತಿಳಿಸುವುದರೊಂದಿಗೆ ಯಾವುದೇ ಸಂದರ್ಭದಲ್ಲಿ ಪೊಲೀಸ್ ರಿಂದ ರಕ್ಷಣೆ ಪಡೆಯಲು ಈ ನಂಬರಿಗೆ ಕಾಲ್ ಮಾಡಬಹುದು ಎಂದು ತಿಳಿಸುವುದರೊಂದಿಗೆ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಿದರು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕರಾದ ಕೊಟ್ರಮ್ಮ ಶಿಕ್ಷಕರು ಹಾಗೂ ಪೊಲೀಸ್ ಸ್ಟೇಷನ್ ಸಿಬ್ಬಂದಿ ವರ್ಗದವರು ಇನ್ನೂ ಇತರರು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು**

## ಮೊಳಕಾಲ್ಮುರು ತಾಲೂಕಿನಲ್ಲಿ ಜಮೀನು ಇಲ್ಲದಂತ ಬಡವರಿಗೆ ಬಗರ್ ಹುಕ್ಕಂ ಜಮೀನುಗಳನ್ನು ಸರ್ಕಾರ ದಿಂದ ಮಂಜೂರು ಮಾಡಿಸಲು-ಮುಂದಾದ ಶಾಸಕರು

**ಮೊಳಕಾಲ್ಮುರು** : ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಾ ಆಡಳಿತ ಸೌಧ ಸಭಾಂಗಣದಲ್ಲಿ ಜನಪ್ರಿಯ ಶಾಸಕರಾದ ಶ್ರೀ ಎನ್ ವೈ ಗೋಪಾಲಕೃಷ್ಣರವರು ವಿಧಾನ ಸಭಾ ಕ್ಷೇತ್ರದ ಬಗರು ಹುಕ್ಕಂ ಸಮೀಕರಣ ಸಮಿತಿ ಪ್ರಥಮ ಸಭೆಯಲ್ಲಿ ಪಾಲ್ಗೊಂಡರು. ಜಮೀನು ಇಲ್ಲದಂತ ಬಡವರಿಗೆ ಈಗ ಸುಮಾರು ವರ್ಷದಿಂದ ಬಗರು ಹುಕ್ಕಂ ಅರ್ಜಿಗಳನ್ನು ಯಥಾಸ್ಥಿತಿಗೆ ಹಾಕಲಾಗಿತ್ತು ಈಗ ಎನ್ ವೈ ಗೋಪಾಲಕೃಷ್ಣ ಶಾಸಕರು ಈ ಜಮೀನು ಇಲ್ಲದಂತ ಬಡವರಿಗೆ ಬಗರ್ ಹುಕ್ಕಂ ಅರ್ಜಿ ಹಾಕಿದಂತ ಫಲಾನುಭವಗಳಿಗೆ ಯಾರಿಗೆ ಜಮೀನುಗಳು ಇರುವುದಿಲ್ಲವೋ ಅಂತ ಫಲಾನುಭವಿಗಳನ್ನು ಪತ್ತೆ ಹಚ್ಚಿ ಪಟ್ಟಿ ಮಾಡಲು ಮುಂದಾದ ಶಾಸಕರು ಈ ಸಂದರ್ಭದಲ್ಲಿ ಜಗದೀಶ್ ತಹಶೀಲ್ದಾರ್, ತಾಲೂಕ್ ಪಂಚಾಯತಿ ಇ.ಓ ಪ್ರಕಾಶ್ ಸಮಿತಿಯ ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಮೊದಲಾದವರು ಉಪಸ್ಥಿತರಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ತಿಪ್ಪೇಸ್ವಾಮಿ. ಹೊಂಬಾಳೆ ಮೊಳಕಾಲ್ಮುರು.**



## ಕೆಂಪೇಗೌಡ ಜಯಂತಿಗೆ ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳ ಗೈರು ಹಾಜರಿ: ತಹಶೀಲ್ದಾರ್ ಕೆಂಡ ಮಂಡಲ






**ಕೂಡ್ಲಿಗಿ** : ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದಲ್ಲಿ ಗುರುವಾರ ರಂದು ಸರ್ಕಾರದ ಆದೇಶದಂತೆ ಕೆಂಪೇಗೌಡರ ಜಯಂತಿಯನ್ನು ಸರಳವಾಗಿ ತಾಲೂಕಾ ಆಡಳಿತ ಕಚೇರಿಯಲ್ಲಿ ಕೆಂಪೇಗೌಡರ ಭಾವ ಚಿತ್ರವನ್ನು ಅಳವಡಿಸಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಹಬ್ಬಗಳ ಅಧ್ಯಕ್ಷರಾದ ಮಾನ್ಯ ತಾಲೂಕಾ ದಂಡಾಧಿಕಾರಿಗಳಾದ ಎಂ ರೇಣುಕ ಇವರ ಸಮ್ಮುಖದಲ್ಲಿ ನಡೆದಂತಹ ಕಾರ್ಯಕ್ರಮದಲ್ಲಿ ಈ ಬಾರಿ ಮೊದಲನೇ ವರ್ಷವಾಗಿ ಸರ್ಕಾರ ಕೆಂಪೇಗೌಡರ ಜಯಂತಿಯನ್ನು ಆಚರಣೆ ಮಾಡುವುದರ ಮೂಲಕ ಜಯಂತಿ ಆಚರಣೆಯ ವರದಿಯನ್ನು ಸಲ್ಲಿಸುವಂತೆ ಆದೇಶವಿದ್ದರೂ ಕೆಂಪೇಗೌಡರ ಜಯಂತಿ ಆಚರಣೆಗೆ ಯಾವುದೇ ತಾಲೂಕಾ ಮಟ್ಟದ ಅಧಿಕಾರಿಗಳು ಭಾಗವಹಿಸದೆ ಗೈರು ಹಾಜರಾಗಿದ್ದು ಕಂಡು ಬಂದಿದ್ದು ಪ್ರವಾಸಿ ಮಂದಿರದಲ್ಲಿ ಹಮ್ಮಿ ಕೊಳ್ಳಲಾಗಿದ್ದ ಕೆಂಪೇಗೌಡರ ಜಯಂತಿಯನ್ನು ಬೆರಳಣಿಕೆಯಷ್ಟು ಎರಡೋ ಮೂರು ಇಲಾಖೆಯ ಸಿಬ್ಬಂದಿಗಳು ಮಾತ್ರ ಕಂಡು ಬಂದಿದ್ದನ್ನು ಇನ್ನೂಳಿದ ಯಾವ ಯಾವ ಇಲಾಖೆಯ ಅಧಿಕಾರಿಗಳು ಹಾಜರಾಗಿಲ್ಲವೋ ಅವರ ವಿರುದ್ಧ ಕ್ರಮ ಕೈಗೊಳ್ಳವುದಾಗಿ ಒಕ್ಕಲಿಗ ಸಂಘದ ಸದಸ್ಯರುಗಳಿಗೆ ತಿಳಿಸಿದ್ದರು. ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷರಾದ ರಾಮದುರ್ಗ ಮಂಜುನಾಥ್ ಉಪಾಧ್ಯಕ್ಷರಾದ ಶ್ರೀರಾಮ್ ಶೆಟ್ಟಿ ಹಳ್ಳಿ ನಿರ್ಕಲಪ್ಪ, ಚಂದ್ರ ಮೌಳಿ, ಆನಂದ ಮುಖಂಡರಾದ ಪಿ.ಬಸವರಾಜ್, ರಾಮದುರ್ಗ ಗುರುಸ್ವಾಮಿ,ಇನ್ನು ಇತರರಿದ್ದರು ಹಾಗೆ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರ ಸಂಘದ ಅಧ್ಯಕ್ಷರಾದ ಪಿ ಶಿವುರಾಜು , ನಿರೂಪಕರಾಗಿ ಉಡಚಪ್ಪ ಶಿಕ್ಷಕರು, ಸ್ವಾಮಿ ವಿವೇಕಾನಂದ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ ಬಿ. ಸಾಲುಮನೆ. ಕೂಡ್ಲಿಗಿ**

## ಶ್ಯಾಮಪ್ರಸಾದ ಮುಖರ್ಜಿಯವರ ಆದರ್ಶ ಅಳವಡಿಸಿಕೊಳ್ಳಿ



**ರಬಕವಿ-ಬನಹಟ್ಟಿ** : ಶ್ಯಾಮ ಪ್ರಸಾದ ಮುಖರ್ಜಿಯವರು ಒಬ್ಬ ಶ್ರೇಷ್ಠ ರಾಜಕಾರಣಿ ಮತ್ತು ಮಹಾನ್ ಶಿಕ್ಷಣ ತಜ್ಞರಾಗಿದ್ದರು. ಅವರ ಜೀವನಾದರ್ಶ, ತತ್ವ ಮತ್ತು ಸಿದ್ಧಾಂತಗಳನ್ನು ಕಾರ್ಯಕರ್ತರು ಅಳವಡಿಸಿಕೊಂಡು, ಪಕ್ಷದ ಸಂಘಟನೆಗೆ ಹೆಚ್ಚು ಮಹತ್ವ ನೀಡಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಭಾನುವಾರ ಇಲ್ಲಿನ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಶ್ಯಾಮಪ್ರಸಾದ ಮುಖರ್ಜಿಯವರ ಪುಣ್ಯಸ್ಮರಣೆಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಬಿಜೆಪಿ ಮುಖಂಡ ಶಿವಾನಂದ ಗಾಯಕವಾಡ ಮಾತನಾಡಿ, ದೇಶದ ಮೊದಲ ಕೈಗಾರಿಕೆ ಮತ್ತು ಪೂರೈಕೆ ಸಚಿವರಾಗಿ ಸೇವೆ ಸಲ್ಲಿಸಿದ ಶ್ಯಾಮ ಪ್ರಸಾದ ಮುಖರ್ಜಿಯವರು 1951 ರಲ್ಲಿ ರಾಷ್ಟ್ರೀಯ ಜನಸಂಘವನ್ನು ಸ್ಥಾಪಿಸಿದರು. ಮುಖರ್ಜಿಯವರು ತಮ್ಮ ಜ್ಞಾನ ಮತ್ತು ನೇರ ನಡೆ ನುಡಿಗಾಗಿ ಸ್ನೇಹಿತರು ಮತ್ತು ವಿರೋಧಿಗಳಿಂದ ಸಮಾನವಾಗಿ ಗೌರವಿಸಲ್ಪಡುತ್ತಿದ್ದರು. ಮುಖರ್ಜಿಯವರ ನಡೆ ನುಡಿಗಳನ್ನು ನಾವು ಪಕ್ಷದ ಏಳ್ಗೆಗಾಗಿ ಬಳಸಿಕೊಳ್ಳಬೇಕು ಎಂದರು.

ನಗರ ಘಟಕದ ಅಧ್ಯಕ್ಷ ಶ್ರೀಶೈಲ ಬೀಳಗಿ, ಶಂಕ್ರೆಪ್ಪ ಬುಜರುಕ, ಗೋವಿಂದ ಡಾಗಾ, ಪ್ರವೀಣ ಧಬಾಡಿ, ಭೀಮಶಿ ಪಾಟೀಲ, ಚಂದ್ರಶೇಖರ ಮಿರ್ಜಿ, ಈರಣ್ಣ ಚಿಂಚಖಂಡಿ, ಪವಿತ್ರಾ ತುಕ್ಕನ್ನವರ, ಗೌರಿ ಮಿಳ್ಳಿ , ಸುವರ್ಣಾ ಕೊಪ್ಪದ, ದೇಸಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ



**ಕೊಟ್ಟೂರು** : ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದ ದಿನಾಂಕ 29 ಜೂನ್ 2024 ರಂದು ಕೊಟ್ಟೂರು ಯೋಜನಾ ವ್ಯಾಪ್ತಿಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಭಾಗಿರತಿ ಪದವಿ ಪೂರ್ವ ಕಾಲೇಜ್ ಸಹಭಾಗಿತ್ವದಲ್ಲಿ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆಯ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಾರ್ಯಕ್ರಮದಲ್ಲಿ ತಾಲ್ಲೂಕಿನ ಯೋಜನಾಧಿಕಾರಿ ಯವರಾದ ನವೀನ್ ಕುಮಾರ್ ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಟ ಪರಿಣಾಮಗಳ ಬಗ್ಗೆ ತಿಳಿಸಿದರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ಮದ್ಯ ವರ್ಜನಾ ಶಿಬಿರಗಳನ್ನು ಮಾಡಲಾಗುತ್ತಿದೆ. ಮೂಗ ಬಸವೇಶ್ವರ ಆಸ್ಪತ್ರೆಯ ವೈದ್ಯರಾದಂತಹ ಡಾ// ಮೂಗಬಸಪ್ಪ ರವರು ಬಿಡಿ, ಸಿಗರೇಟ್ ಸೇವನೆ, ಮದ್ಯಪಾನ, ಡ್ರಗ್ಸ್ ಸೇವನೆ ಯಿಂದ ಕ್ಯಾನ್ಸರ್ ಕಾಯಿಲೆ ಬರುತ್ತದೆ ಇದನ್ನು ವಾಸಿ ಮಾಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ಮಕ್ಕಳು ಓದಿನ ಕಡೆ ಹೆಚ್ಚುಗಮನ ನೀಡಬೇಕು ಅಮಲು ಪದಾರ್ಥಗಳ ಬಗ್ಗೆ ಗಮನ ನೀಡ ಬಾರದೆಂದು ತಿಳಿಸಿದರು, ಜಿಲ್ಲಾ ಜನ ಜಾಗೃತಿ ವೇದಿಕೆ ಸದಸ್ಯರಾದ ರೇವಣ ಸಿದ್ದಪ್ಪರವರು ಮಕ್ಕಳಲ್ಲಿ ಮಾದಕ ವಸ್ತುಗಳ ಸೇವನೆ ಯಿಂದ ಸಮಾಜದಲ್ಲಿ ಗೌರವ ಸಿಗುವುದಿಲ್ಲವೆಂದು ತಿಳಿಸಿದರು, ಶ್ರೀಮತಿ ನಿರ್ಮಲ ಶಿವನಗುತ್ತಿಯವರು ಮಕ್ಕಳು ಮಾದಕ ವಸ್ತುಗಳನ್ನು ಸೇವನೆ ಮಾಡಿ ದುಶ್ಚಟಕ್ಕೆ ಬಲಿಯಾಗಿ ವಿದ್ಯಾಭ್ಯಾಸವನ್ನು ಹಾಳು ಮಾಡಿಕೊಳ್ಳದೆ ಮನೆಯಲ್ಲಿ ಒಳ್ಳೆಯ ಸಂಸ್ಕಾರ ಕಲಿತು ಸಮಾಜದಲ್ಲಿ ಉತ್ತಮ ವ್ಯಕ್ತಿ ಆಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮೇಲ್ವಿಚಾರಕರಾದ ರುದ್ರೇಶ್, ಕೃಷಿ ಅಧಿಕಾರಿ ಮಹಾಂತೇಶ, ಸೇವಾ ಪ್ರತಿ ನಿಧಿಗಳಾದ ಸುಧಾ, ಲಕ್ಷ್ಮಿ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ ಕೊಟ್ಟೂರು.**

## ಕೆಎಂಎಫ್ ಚುನಾವಣೆ, ಎರಡೂ ಕ್ಷೇತ್ರದ ಗೆದ್ದ ಬಿಜೆಪಿ ರೈತರ ಪರ ಕೆಲಸ ಮಾಡಿ: ಶಾಸಕ ಸವದಿ



**ತೇರದಾಳ** : ವಿಜಯಪುರ-ಬಾಗಲಕೋಟೆ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ಚುನಾವಣೆಯಲ್ಲಿ ರಬಕವಿ ಬನಹಟ್ಟಿ ತಾಲೂಕಿನ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲವು ಸಾಧಿಸಿದ್ದು ಪಕ್ಷಕ್ಕೆ ಮತ್ತಷ್ಟು ಬಲ ಬಂದಂತಾಗಿದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲವು ಸಾಧಿಸಿದ ಕಾಲತಿಪ್ಪಿಯ ಲಕ್ಕಪ್ಪ ಪಾಟೀಲ ಹಾಗೂ ಹಿಪ್ಪರಗಿಯ ಚಂದ್ರಶೇಖರ ಆದಬಸಪ್ಪಗೋಳ ಅವರನ್ನು ಸನ್ಮಾನಿಸಿ ಮಾತನಾಡಿದರು.

ಒಕ್ಕೂಟದಲ್ಲಿ ರೈತರ ಪರವಾಗಿ ಕೆಲಸ ಮಾಡುವ ಮೂಲಕ ದೊರೆತ ಅವಕಾಶವನ್ನು ಸದುಪಯೋಗಪಡೆದುಕೊಳ್ಳಬೇಕು. ಆವಾಗಲೇ ನೀವು ಮತ್ತಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ ಎಂದು ಸಲಹೆ ನೀಡಿದರು. ಸಂಘಟಿತವಾಗಿ ಕೆಲಸ ಮಾಡುವ ದೃಢ ಸಂಕಲ್ಪದೊಂದಿದೆ ಈ ಭಾಗದ ರೈತರ ಬೇಡಿಕೆಗಳಿಗೆ ಧ್ವನಿಯಾಗಿ ನಿಲ್ಲಿ ಎಂದು ಆಯ್ಕೆಗೊಂಡ ನಿರ್ದೇಶಕರಿಗೆ ಹೇಳಿದರು. ಕೆಎಂಎಫ್ ನೂತನ ನಿರ್ದೇಶಕರಾದ ಲಕ್ಕಪ್ಪ ಪಾಟೀಲ, ಚಂದ್ರಶೇಖರ ಆದಬಸಪ್ಪಗೋಳ, ಪಕ್ಷದ ಗ್ರಾಮೀಣ ಮಂಡಳ ಅಧ್ಯಕ್ಷ ಸುರೇಶ ಅಕ್ಕಿವಾಟ, ಜಿಪಂ ಮಾಜಿ ಸದಸ್ಯ ಪುಂಡಲಿಕ ಪಾಲಭಾವಿ, ಶಂಕರ ಹುನ್ನೂರ, ಲಕ್ಷ್ಮಣ ಪಾಟೀಲ, ಪ್ರಕಾಶ ಸಿದ್ದಾಪುರ, ಶ್ರೀಶೈಲ ಮಗದುಂ, ರಾಮಪ್ಪ ಪಾಟೀಲ ಇದ್ದರು.

# ಕೆಂಪೆಗೌಡ ಹಾಗೂ ಡಾ.ಫ.ಗು ಹಳಕಟ್ಟಿ ಜನ್ಮ ದಿನ ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ: ಎಡಿಸಿ ಪರಶುರಾಮ ಶಿನ್ನಾಳಕರ್

**ಬಾಗಲಕೋಟೆ :** ನಾಡಪ್ರಭು ಶ್ರೀ ಕೆಂಪೆಗೌಡ ಜಯಂತಿ ಹಾಗೂ ಡಾ. ಫ ಗು ಹಳಕಟ್ಟಿ ಜನ್ಮ ದಿನದ ನಿಮಿತ್ಯ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ್ ಹೇಳಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಸಂಜೆ ಜರುಗಿದ ಶ್ರೀ ಕೆಂಪೆಗೌಡ ಹಾಗೂ ಡಾ.ಫ.ಗು.ಹಳಕಟ್ಟಿ ಜನ್ಮ ದಿನದ ನಿಮಿತ್ಯ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ನಾಡಪ್ರಭು ಕೆಂಪೆಗೌಡ ಜಯಂತಿಯನ್ನು ಜೂನ 27 ರಂದು ಹಾಗೂ ಫ.ಗು ಹಳಕಟ್ಟಿ ಅವರ ಜನ್ಮ ದಿನವಾದ ಜುಲೈ 2 ರಂದು ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಎಂದು ಆಚರಿಸಲಾಗುವುದು ಎಂದರು.

ಕೆಂಪೆಗೌಡರ ಜಯಂತಿಯನ್ನು ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ಸರಕಾರಿ ಶಾಲೆ ಅಥವಾ ಕಾಲೇಜಿನಲ್ಲಿ ಆಚರಿಸಲಾಗುವದು, ಹಳಕಟ್ಟಿಯವರ ಜನ್ಮ ದಿನಾಚರಣೆಗಾಗಿ ನವನಗರದ ಡಾ. ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಅಲ್ಲದೇ ಶಾಲಾ ಕಾಲೇಜುಗಳಲ್ಲಿ ಪ್ರಬಂದ, ಭಾಷಣ ಸ್ಪರ್ಧೆ ಏರ್ಪಡಿಸಲಾಗುವುದು. ವೇದಿಕೆ ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಜನಪ್ರತಿನಿದಿಗಳು ಹಾಗೂ ಗಣ್ಯಮಾನ್ಯರನ್ನು ಆಮಂತ್ರಣ ಪತ್ರಿಕೆಗಳನ್ನು ನೀಡಿ ಆಹ್ವಾನಿಸಲಾಗುವುದು. ನುರಿತ ಉಪನ್ಯಾಸಕರಿಂದ ಉಪನ್ಯಾಸ ಮತ್ತು ಸಂಗೀತ ಕಲಾ ತಂಡಗಳಿಂದ ಸಂಗೀತ ಗಾಯನ ಕಾರ್ಯಕ್ರಮ ಏರ್ಪಡಿಸಲಾಗುವುದು. ಕಾರ್ಯಕ್ರಮಕ್ಕೆ ಕೇವಲ ನೇಕಾರ ಸಮುದಾಯದವರು ಸೇರದೆ, ಎಲ್ಲ ಸಮುದಾಯ ಭಾಂದವರು, ವಚನ ಸಾಹಿತ್ಯ ಪ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾಜಕ್ಕೆ ಕೊಡುಗೆ ನೀಡಿದ ಮಹನೀಯರ ಜನ್ಮ ದಿನಾರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ ಹಾಗೂ ಜಿಲ್ಲಾ ಶರಣ ಮತ್ತು ವಚನ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಮತ್ತು ಸಮಾಜ ಮುಖಂಡರು ಇದ್ದರು.

# ಶ್ವೇತಾ ಪವಾರಗೆ ಶೈಕ್ಷಣಿಕ ಸಾಧನಾ ಪ್ರಶಸ್ತಿ

**ಮಹಾಲಿಂಗಪುರ :** ಸ್ಥಳೀಯ ಬುದ್ನಿ ಪಿಡಿ ನಿವಾಸಿ ಶ್ವೇತಾ ಅಶೋಕ ಪವಾರ ಸಮಾಜ ಕಲ್ಯಾಣ ಇಲಾಖೆಯ ಶೈಕ್ಷಣಿಕ ಸಾಧನಾ ಪ್ರಶಸ್ತಿ ಪಡೆದಿದ್ದಾಳೆ.



ಸಂಕೇಶ್ವರದ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿದ್ದು ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 576 (ಶೇ.96) ಅಂಕ ಗಳಿಸಿ ಸಾಧನೆ ಮಾಡಿದ ಪ್ರಯುಕ್ತ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಶಸ್ತಿ ಮತ್ತು ನಗದು ನೀಡಿ ಗೌರವಿಸಿದೆ.

ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಆಯೋಜಿದ್ದ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹಾದೇವಪ್ಪ ಹಾಗೂ ಇಲಾಖೆಯ ಅಧಿಕಾರಿಗಳು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಮರಾಠ ಸಮಾಜದ ಅಧ್ಯಕ್ಷ ಮಹೇಶ ಜಾಧವ, ರಾಮಚಂದ್ರ ಪವಾರ, ಮಲ್ಲಪ್ಪ ಅಂಬಣ್ಣಗೋಳ, ಅರ್ಜುನ ಮೋಪಗಾರ, ಮಹಾದೇವ ಸಾವಂತ, ಚಂದ್ರಶೇಖರ ಮೋರೆ, ಆನಂದ ಪವಾರ, ಅರುಣ ವಾಘಮೋರೆ, ಕುಮಾರ ಪವಾರ, ಕೇದಾರಿ ಪವಾರ ಸೇರಿದಂತೆ ಸಮಾಜದ ಮುಖಂಡರು ಬಾಲಕಿಯ ಸಾಧನೆಗೆ ಅಭಿನಂದಿಸಿದ್ದಾರೆ.

# ಸಂಭ್ರಮದ ಕಾರ ಹುಣ್ಣಿಮೆ: ಗೌಡರ ಎತ್ತು ಪ್ರಥಮ

**ಮಹಾಲಿಂಗಪುರ :** ಉತ್ತರ ಕರ್ನಾಟಕ ಗ್ರಾಮೀಣ ಭಾಗದ ರೈತರ ಮಳೆಗಾಲದ ಮೊದಲ ಹಬ್ಬವಾದ ಕಾರಹುಣ್ಣಿಮೆಯ ನಿಮಿತ್ಯ ಎತ್ತುಗಳ ಕರಿ ಹರಿಯುವ ಕಾರ್ಯಕ್ರಮ ಶನಿವಾರ ಸಂಜೆ 7ಕ್ಕೆ ನಡೆಯಿತು. ಮಹಾಲಿಂಗೇಶ್ವರ ದೇವಸ್ಥಾನದ ಸೇವಕರಾದ ಈಶ್ವರ ಮಠದ, ಶ್ರೀಶೈಲ ಅವರು ಮಹಾಲಿಂಗೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಕರಿ ಹರಿಯುವ ಎತ್ತುಗಳ ಕೊಡುಗಳಿಗೆ ಕೊಡುಬಳೆ ಹಾಕಿ ಪೂಜೆ ಸಲ್ಲಿಸಿದರು.





ನಂತರ ಎತ್ತುಗಳನ್ನು ಜೋಡು ರಸ್ತೆಯ ವಿವೇಕವೃತ್ತದಿಂದ ಮಹಾಲಿಂಗೇಶ್ವರ ಗುಡಿಯವರೆಗೆ ಓಡಿಸಲಾಯಿತು. ಪ್ರಸಕ್ತ ವರ್ಷದ ಕರಿಹರಿಯುವ ಓಟದಲ್ಲಿ ಸಂಪ್ರದಾಯದಂತೆ ಗೌಡರ ಎತ್ತು ಪ್ರಥಮ ಸ್ಥಾನ ಗಳಿಸಿತು. ಕೃಷ್ಣಗೌಡ ಪಾಟೀಲ, ಕರೆಪ್ಪ ಕಪರಟ್ಟಿ, ಶ್ರೀನಿವಾಸ ಮಾಲಬಸರಿ ಎತ್ತುಗಳೊಂದಿಗೆ ಓಡಿ ಸಾಹಸ ಮರೆದರು. ಎತ್ತುಗಳ ಕರಿ ಹರಿಯುವದನ್ನು ನೋಡಲು ಮಹಾಲಿಂಗೇಶ್ವರ ದೇವಸ್ಥಾನದಿಂದ ಡಬಲ್ ರಸ್ತೆಯವರೆಗೆ ಸಾವಿರಾರು ಜನರು ಜಮಾಯಿಸಿದ್ದರು.

ಕರಿ ಹರಿಯುವ ಸಂದರ್ಭದಲ್ಲಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿ, ಪಟ್ಟಣದ ಹಿರಿಯರಾದ ಯಲ್ಲನಗೌಡ ಪಾಟೀಲ, ಮಹಾಲಿಂಗಪ್ಪ ತಟ್ಟಿಮನಿ, ರವಿಗೌಡ ಪಾಟೀಲ, ನಿಂಗಪ್ಪ ಬಾಳಿಕಾಯಿ, ವಿಜುಗೌಡ ಪಾಟೀಲ, ಮಹಾಲಿಂಗಪ್ಪ ಜಕ್ಕನ್ನವರ, ಬಸವರಾಜ ಘಂಟಿ, ಗಂಗಾಧರ ಮೇಟಿ, ಕರೆಪ್ಪ ಮೇಟಿ, ವಿಠ್ಠಲ ಕುಳಲಿ, ಯಲ್ಲಪ್ಪ ಹಟ್ಟಿ, ಮುಸ್ತಕ ಚಿಕ್ಕೋಡಿ, ಹನಮಂತ ಬುರುಡ, ತುಳಜಪ್ಪ ಬಾಳಿಕಾಯಿ, ಶಿವಾನಂದ ಮೇಟಿ, ಸುನೀಲಗೌಡ ಪಾಟೀಲ, ಹರೀಶ ನಾಯಕ, ಸುನೀಲಗೌಡ ಪಾಟೀಲ, ಸುಭಾಸ ವಜ್ಜರಮಟ್ಟಿ, ಮಹಾಲಿಂಗ ಮಾಳಿ, ಸದಾಶಿವ ಗೊಬ್ಬರದ, ಕಲ್ಲಪ್ಪ ಹೆಬ್ಬಾಳ, ಆನಂದ ಬಂಡಿ, ಅರ್ಜುನ ಮೋಪಗಾರ, ಮಹಾಲಿಂಗ ಯ.ಪಾಟೀಲ, ಶಿವಕುಮಾರ ಪಾಟೀಲ, ಕಿರಣ ಪಾಟೀಲ, ಅಶೋಕ ಜ.ಅಂಗಡಿ ಸೇರಿದಂತೆ ಹಲವರು ಇದ್ದರು.

**ನಂಬಿಕೆ :**
ಗೌಡರ ಎತ್ತು ಪ್ರಥಮ ಬಂದರೆ ಮುಂಗಾರು, ಮೇಟಿಯವರ ಎತ್ತು ಪ್ರಥಮ ಬಂದರೆ ಹಿಂಗಾರು ಫಸಲು ಸಮೃದ್ಧಿಯಾಗಿ ಬರುತ್ತದೆ ಎಂಬ ನಂಬಿಕೆ ಇದ್ದು, ಅಲ್ಲದೆ ಕರಿ ಹರಿಯುವ ಸಂದರ್ಭದಲ್ಲಿ ಮಳೆಯಾಗಿ ಎತ್ತುಗಳ ಕೊಂಬು ತೊಯ್ದರೆ, ಮುಂದಿನ ಮಳೆಗಳ ಪ್ರಮಾಣ ಕಡಿಮೆಯಾಗುತ್ತದೆ ಎಂಬ ನಂಬಿಕೆ ರೈತ ಸಮುದಾಯದಲ್ಲಿದೆ.

**ಮಣ್ಣೆತ್ತಿನ ಪೂಜೆ :**
ಕಾರಹುಣ್ಣಿಮೆ ನಿಮಿತ್ಯ ಮಣ್ಣಿನ ಎತ್ತುಗಳನ್ನು ಕೊಂಡುಕೊಂಡು ಮಹಿಳೆಯರು ಪೂಜೆ ಸಲ್ಲಿಸಿದರು. ಮಣ್ಣೆತ್ತಿನ ಬಸವಣ್ಣನ ನೈವೆದ್ಯ ಮಾಡಲು ಅಡಿಕೆ ಹಾಕಿ ಅನ್ನವನ್ನು ತಯಾರಿಸುವ ಸಂಪ್ರದಾಯ ರೂಡಿಯಲ್ಲಿದೆ. ನೈವೈದ್ಯ ಮಾಡುವಾಗ ಅನ್ನದಲ್ಲಿಯ ಅಡಿಕೆ ಬಸವಣ್ಣನ ನೈವದ್ಯದಲ್ಲಿ ಬಂದರೆ ಪ್ರಾಣಿ ಸಂಕುಲಕ್ಕೆ ಸುಖ, ಮನುಷ್ಯರ ಊಟದಲ್ಲಿ ಸಿಕ್ಕರೆ ಜನ ಸಮುದಾಯಕ್ಕೆ ಸುಖ ಪ್ರಾಪ್ತಿಯಾಗುತ್ತದೆ ಎಂಬುದು ಗುರು ಹಿರಿಯರ ನಂಬಿಕೆಯಾಗಿದೆ.

# ಯೋಗ ದಿಂದ ಆರೋಗ್ಯ ವೃದ್ಧಿ: ಎನ್.ಎ.ಲಮಾಣಿ

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿಯ ಪಟ್ಟಣ ಪಂಚಾಯತ್ ಕಾರ್ಯಾಲಯ ಆವರಣದಲ್ಲಿ 10ನೇ ವಿಶ್ವ ಯೋಗ ದಿನಾಚರಣೆಯ ಕಾರ್ಯಕ್ರಮ ಜರಗಿತು. ಕಾರ್ಯಕ್ರಮದ ಉದ್ಘಾಟಿಸಿದ ಪಪಂ ಮುಖ್ಯಾಧಿಕಾರಿ ಎನ್.ಎ.ಲಮಾಣಿ ಯೋಗದಿಂದ ಆರೋಗ್ಯ ವೃದ್ಧಿಯಾಗುತ್ತದೆ. ಆದರಿಂದ ಪ್ರತಿನಿತ್ಯ ಜೀವನದಲ್ಲಿ ಯೋಗಕ್ಕಾಗಿ ಸಮಯವನ್ನು ನೀಡಿ. ಯೋಗ ಶಿಕ್ಷಕರು ಹೇಳಿಕೊಡುವ ಸರಳ ಯೋಗ ಕ್ರಿಯೆಗಳನ್ನು ಮೈಗೂಡಿಸಿಕೊಂಡರೆ ಉತ್ತಮ ಆರೋಗ್ಯದಿಂದ ಬದುಕಲು ಸಾಧ್ಯವಾಗುತ್ತದೆ ಎಂದರು. ಸ್ಥಳಿಯ ಯೋಗ ತರಬೇತಿದಾರರಾದ ರಾಘವೇಂದ್ರ ನೀಲಣ್ಣವರ ಮಾತನಾಡಿ ಭಾರತೀಯ ಖುಷಿಗಳು ನೀಡಿದ ಲೋಕ ಕಲ್ಯಾಣ ವಿದ್ಯೆಯೇ ಯೋಗ ಮತ್ತು ಆಯುರ್ವೇದ ಜ್ಞಾನವಾಗಿದೆ. ಈ ವರ್ಷದ ಯೋಗ ದಿನಾಚರಣೆ ದೇಹವಾಕ್ಯ ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ, ಅಂದರೆ ನಾನು ನನ್ನ ಆರೋಗ್ಯಕ್ಕಾಗಿಮತ್ತುಸಮಾಜದಆರೋಗ್ಯವೃದ್ಧಿಗಾಗಿ ನಿತ್ಯ ಯೋಗ ಮಾಡಬೇಕು ಎಂದರು. ಪ್ರಥಮ ದರ್ಜೆ ಸಹಾಯಕರು ಪಿ.ಡಿ.ನಾಗನೂರು ಹಾಗೂ ಪಪಂ ಸಿಬ್ಬಂದಿ ವರ್ಗ ಮತ್ತು ಪೌರಕಾರ್ಮಿಕರು ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದರು.



# ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ನೂತನ ಪದಾಧಿಕಾರಿಗಳ ಆಯ್ಕೆ

**ಇಳಕಲ್ :** ನಗರದ ಪ್ರತಿಷ್ಠಿತ ಸಮಾಜ ಸೇವಾ ಸಂಸ್ಥೆಯಾದ ಶ್ರೀ ರಾಮಾನುಜಾಚಾರ್ಯ ಫೌಂಡೇಶನ್ ಆಡಳಿತ ಮಂಡಳಿ ಸದಸ್ಯರ ಸಭೆಯು ಮಾಹೇಶ್ವರಿ ಆಸ್ಪತ್ರೆಯಲ್ಲಿರುವ ಅಯೋಧ್ಯಬಾಯಿ ಕಿಸನ್‌ಗೋಪಾಲ ದರಕ ಸಭಾಭವನದಲ್ಲಿ ಜರುಗಿ ನಿರ್ಗಮಿತ ಅಧ್ಯಕ್ಷ ರಾಹುಲ್ ಬಂಡಾರಿ ಇವರ ಅಧ್ಯಕ್ಷತೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.



ಯತಿರಾಜ ದರಕ, ಅಧ್ಯಕ್ಷರು | ಸಂದೀಪ ಮೆಹತಾ, ಉಪಾಧ್ಯಕ್ಷರು

ಮುಂಬರುವ ಅವಧಿಗೆ ಅಧ್ಯಕ್ಷರಾಗಿ ಯತಿರಾಜ್ ದರಕ, ಉಪಾಧ್ಯಕ್ಷರಾಗಿ ಸಂದೀಪ್ ಎಸ್. ಮೆಹತಾ, ಪ್ರಧಾನ ಕಾರ್ಯದರ್ಶಿಯಾಗಿ ಅಭಿಷೇಕ್ ದರಕ ಮತ್ತು ಖಜಾಂಚಿಯಾಗಿ ಜಯಪ್ರಕಾಶ ನಾವಂದರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತೆಂದು ರಾಹುಲ್ ಬಂಡಾರಿ ತಿಳಿಸಿದರು. ಈ ಸಭೆಯಲ್ಲಿ ಮಾಜಿ ಉಪಾಧ್ಯಕ್ಷ ವಿಷ್ಣು ಅಸವಾ, ಮನೋಹರ ಕರವಾ, ಭರತ್ ದರಕ, ಡಾ॥ ರಶ್ಮೀ ದರಕ, ಗೋಕುಲ್ ದರಕ, ಸೂರಜ್ ದರಕ ಉಪಸ್ಥಿತರಿದ್ದರು.

# ಶಿಕ್ಷಣದ ಮಹತ್ವ



ಸಾಮಾನ್ಯ ಅರ್ಥದಲ್ಲಿ ಶಿಕ್ಷಣ, ಎಂದರೆ ಜ್ಞಾನ, ಕೌಶಲ್ಯ ಮತ್ತು ಜನರು ಒಂದು ಗುಂಪಿನ ಪದ್ಧತಿ ಬೋಧನೆ, ತರಬೇತಿ ಅಥವಾ ಸಂಶೋಧನೆಯ ಮೂಲಕ ಮುಂದಿನ ಪೀಳಿಗೆಗೆ ವರ್ಗಾಯಿಸುವ ವ್ಯವಸ್ಥೆ. ಇದರಲ್ಲಿ ಕಲಿಕೆಯು ಒಂದು ರೂಪ. ಶಿಕ್ಷಣ ಆಗಾಗ್ಗೆ ಇತರರ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಒಬ್ಬ ಯೋಚಿಸುತ್ತಾನೆ. ದಾರಿಯಲ್ಲಿ ಒಂದು ರೂಪುಗೊಳ್ಳುವಿಕೆಯು ಯಾವ ಪರಿಣಾಮವನ್ನು ಹೊಂದಿದೆ ಎಂದು. ಯಾವುದೇ ಒಂದು ಅನುಭವ, ಭಾವನೆ ಅಥವಾ ಕೃತ್ಯಗಳನ್ನು ಶೈಕ್ಷಣಿಕವೆಂದು ಪರಿಗಣಿಸಬಹುದು. ಶಿಕ್ಷಣವು ಸಾಮಾನ್ಯವಾಗಿ ಪ್ರಿಸ್ಕೂಲ್, ಪ್ರಾಥಮಿಕ ಶಾಲೆ, ಸೆಕೆಂಡರಿ ಶಾಲೆ ಮತ್ತು ನಂತರ ಕಾಲೇಜು, ವಿಶ್ವವಿದ್ಯಾಲಯ ಅಥವಾ ಶಿಷ್ಯವೃತ್ತಿಯ ಎಂದು ಹಲವು ಹಂತಗಳಲ್ಲಿ ವಿಂಗಡಿಸಲಾಗಿದೆ. ಶಿಕ್ಷಣ/ವಿದ್ಯೆ ಕಲಿಸುವಾತನೆ ಶಿಕ್ಷಕ.

**ಶಿಕ್ಷಣ ಎಂದರೇನು?**

ಶಿಕ್ಷಣವು ನಮ್ಮ ಸಮಾಜ, ಕುಟುಂಬಗಳು ಮತ್ತು ರಾಷ್ಟ್ರದ ಬಗ್ಗೆ ನಾವು ಹೊಂದಿರುವ ಕರ್ತವ್ಯಗಳನ್ನು ತಿಳಿದುಕೊಳ್ಳಲು, ಅರ್ಥಮಾಡಿಕೊಳ್ಳಲು ಮತ್ತು ಗೌರವಿಸಲು ಕೌಶಲ್ಯ, ತಂತ್ರಗಳು, ಮಾಹಿತಿ ಮತ್ತು ಜ್ಞಾನವನ್ನು ನೀಡುವ ಮಾಧ್ಯಮವಾಗಿದೆ. ಆದ್ದರಿಂದ, ಜೀವನದಲ್ಲಿ ಶಿಕ್ಷಣದ ಪ್ರಾಮುಖ್ಯತೆಯ ಪ್ರಮಾಣವು ದೊಡ್ಡದಾಗಿದೆ ಮತ್ತು ಬಹುಪಟ್ಟು. ಜೀವನದಲ್ಲಿ ಶಿಕ್ಷಣದ ಪ್ರಾಮುಖ್ಯತೆ ಏನೆಂದರೆ, ಪ್ರತಿಯೊಬ್ಬರೂ ಜಗತ್ತನ್ನು ಮತ್ತು ನಮ್ಮ ಸಮಾಜವನ್ನು ನೋಡುವ ಉತ್ತಮ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಶಿಕ್ಷಣವು ಹೊಸ ಆಲೋಚನೆಗಳನ್ನು ಪಡೆಯಲು ಮತ್ತು ಹೊಸ ಆಲೋಚನೆಗಳನ್ನು ಅನ್ವೇಷಿಸಲು ನಮಗೆ ಸಹಾಯ ಮಾಡುತ್ತದೆ.

**ಶಿಕ್ಷಣದ ಪ್ರಾಮುಖ್ಯತೆ:**

ಶಿಕ್ಷಣವು ವ್ಯಕ್ತಿಯು ಜ್ಞಾನವನ್ನು ಪಡೆಯಲು ಮತ್ತು ಜೀವನದಲ್ಲಿ ಆತ್ಮವಿಶ್ವಾಸವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಇದು ನಿಮ್ಮ ವೃತ್ತಿ ಮತ್ತು ನಿಮ್ಮ ವೈಯಕ್ತಿಕ ಬೆಳವಣಿಗೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ವಿದ್ಯಾವಂತ ವ್ಯಕ್ತಿ ಸಮಾಜದಲ್ಲಿ ಶ್ರೇಷ್ಠ ನಾಗರಿಕನಾಗಬಹುದು. ಜೀವನದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಇದು ನಿಮಗೆ ಸಹಾಯ ಮಾಡುತ್ತದೆ.

ಆಧುನಿಕ, ಅಭಿವೃದ್ಧಿ ಹೊಂದಿದ ಮತ್ತು ಕೈಗಾರಿಕೀಕರಣಗೊಂಡ ಜಗತ್ತು ಶಿಕ್ಷಣದ ಚಕ್ರಗಳ ಮೇಲೆ ಓಡುತ್ತಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ನಮಗೆಲ್ಲರಿಗೂ ಶಿಕ್ಷಣದ ಜ್ಯೋತಿ ಬೇಕು. ಶಿಕ್ಷಣವು ಜ್ಞಾನವನ್ನು ನೀಡುವುದು ಮಾತ್ರವಲ್ಲದೆ ಕ್ರಿಯಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ , ಇದು ದೈನಂದಿನ ಜೀವನ ಮತ್ತು ವೃತ್ತಿಪರ ಪರಿಸರದ ವಿವಿಧ ಅಂಶಗಳಿಗೆ ಹೊಂದಿಕೊಳ್ಳಲು ಮತ್ತು ಉತ್ಕೃಷ್ಟಗೊಳಿಸಲು ನಿರ್ಣಾಯಕವಾಗಿದೆ. ಒಬ್ಬ ಅಶಿಕ್ಷಿತ ವ್ಯಕ್ತಿಯು ಒಬ್ಬರಿಗೊಬ್ಬರು ಮನುಷ್ಯರಾಗಿ ಮತ್ತು ಒಟ್ಟಾರೆಯಾಗಿ ಪ್ರಪಂಚದ ಬಗ್ಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಸಂಪೂರ್ಣವಾಗಿ ತಿಳಿದಿರುವುದಿಲ್ಲ. ಮನುಷ್ಯರಾಗಿ, ನಾವು ವಾಸಿಸುವ ಸಮಾಜಕ್ಕೆ ನಾವು ಹಿಂತಿರುಗಿಸಬೇಕು ಮತ್ತು ಎಲ್ಲರಿಗೂ ಬದುಕಲು ಉತ್ತಮ ಸ್ಥಳವನ್ನು ಮಾಡಬೇಕು. ಸರಿಯಾದ ಶಿಕ್ಷಣವು ಒಬ್ಬ ವ್ಯಕ್ತಿಗೆ ಅವರ ಆಸಕ್ತಿಗಳನ್ನು ಮೀರಿ ಯೋಚಿಸಲು ಕಲಿಸುತ್ತದೆ ಮತ್ತು ಮುಂದಿನ ಪೀಳಿಗೆಗೆ ಜಗತ್ತನ್ನು ಸಂತೋಷದ, ಸುರಕ್ಷಿತ ಸ್ಥಳವನ್ನಾಗಿ ಮಾಡುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಭಾರತದಲ್ಲಿ ಆದಿಕಾಲದಿಂದಲು ನಡೆದುಕೊಂಡು ಬಂದ ಗುರುಕುಲ ಶಿಕ್ಷಣ ವ್ಯವಸ್ಥೆಯು ಜಗತ್ತಿನ ಅತ್ಯಂತ ಪುರಾತನ ಶಿಕ್ಷಣ ವ್ಯವಸ್ಥೆಯಾಗಿದೆ. ಅಲ್ಲಿ ಆಳವಾಗಿ ಒಂದೆ ವಿಚಾರದ ಬಗ್ಗೆ ಕುರಿತು ಅಧ್ಯಯನ ನಡೆಯುತ್ತಿತ್ತು. ಉದಾಹರಣೆಗೆ, ವೇದ, ಉಪನಿಷತ್,ಆಯುರ್ವೇದ, ಯುದ್ದಕಲೆ, ಚಿತ್ರಕಲೆ, ಸಂಗೀತ, ಗಣಿತಶಾಸ್ತ್ರ,ಅರ್ಥಶಾಸ್ತ್ರ,ಯೋಗ ಇಂಥ ವಿಷಯಗಳ ಬಗ್ಗೆ ಅಧ್ಯಯನಗಳು ಜರುಗಿ ವಿದ್ಯಾವಂತರಿಗಿಂತ ಹೆಚ್ಚಾಗಿ ಜ್ಞಾನವಂತರು, ಸುಶಿಕ್ಷಿತರು ಇದ್ದರು.


ಭಾರತಕ್ಕೆ ಬ್ರೀಟಿಷರ ಆಗಮನದಿಂದ ನಮ್ಮ ಗುರುಕುಲ ಮಾದರಿಯಿಂದ ಶಾಲೆಯ ಮಾದರಿಯನ್ನು ಪಡೆಯಿತು. ಲಾರ್ಡ್ ಮೆಕಾಲೆಯು ಭಾರತೀಯ ಶಿಕ್ಷಣದಲ್ಲಿ ಬದಲಾವಣೆ ತಂದು ಕೇವಲ ಬ್ರಾಹ್ಮಣ ಕ್ಷತ್ರಿಯ ಪುರುಷರಿಗೆ ಮೀಸಲಿದ್ದ ಶಿಕ್ಷಣವನ್ನು (ವರ್ಣಾಶ್ರಮ ವ್ಯವಸ್ಥೆಯಲ್ಲಿ) ಎಲ್ಲಾ ಭಾರತೀಯರಿಗೂ ಜಾತಿ, ಲಿಂಗ, ಬಣ್ಣ ಭೇದವಿಲ್ಲದೆ ಶಿಕ್ಷಣವನ್ನು ಪಡೆಯಲು ಅನುವು ಮಾಡಿಕೊಟ್ಟನು. ಒಂದನೇ ತರಗತಿಯಿಂದ 10 ನೇ ತರಗತಿಯವರೆಗೆ ಭಾರತ ಸರ್ಕಾರವು ಉಚಿತವಾಗಿ ಶಿಕ್ಷಣವನ್ನು ನೀಡಿ, ಅದನ್ನು ಶಿಕ್ಷಣವನ್ನು ಪಡೆಯುವ ಹಕ್ಕನ್ನಾಗಿ ಮಾಡಿದೆ.

ಅಭಿವೃದ್ಧಿಶೀಲ ವಿಶ್ವದಲ್ಲಿ 1909 ರಿಂದ ಶಾಲೆಗೆ ಹೋಗುವ ಮಕ್ಕಳ ಅನುಪಾತ ಹೆಚ್ಚಾಗಿದೆ. ಮೊದಲು, ಹುಡುಗರು ಅಲ್ಪಸಂಖ್ಯಾತ ಶಾಲೆಗೆ ಹೋಗುತ್ತಿದ್ದರು. 21 ನೇ ಶತಮಾನದ ಆರಂಭದ ಹೊತ್ತಿಗೆ ವಿಶ್ವದ ಬಹುತೇಕ ವಲಯಗಳಲ್ಲಿ 73 ಮಿಲಿಯನ್ ಮಕ್ಕಳು, ಪ್ರಾಥಮಿಕ ಶಾಲೆಗೆ ಹೋಗಲಿಲ್ಲ. ಬಡವರಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳು ಇದ್ದಾರೆ. 200ಕಿಂತ ಹೆಚ್ಚು ಮಿಲಿಯನ್ ಮಕ್ಕಳು, ಮಾಧ್ಯಮಿಕ ಶಾಲೆಗೆ ಹೋಗಲಿಲ್ಲ. ಆದರೂ, ಕಳೆದ ದಶಕದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಮಾಡಲಾಗಿದೆ. ಇದು ಪ್ರಗತಿಯ ಕಡೆಗೆ ಕೊಂದೊಯ್ಯುವ ಎಂಟು ಅಂತಾರಾಷ್ಟ್ರೀಯ ಸಹಸ್ರಮಾನ ಅಭಿವೃದ್ಧಿ ಗುರಿಗಳಲ್ಲಿ ಒಂದಾಗಿದೆ. ನಿರೀಕ್ಷಿತ ದಾನಿಗಳಿಂದ ದತ್ತಿ ನಿಧಿ ನೆರವು, ನಿರ್ದಿಷ್ಟವಾಗಿ ನಿರಂತರ ಸಮಸ್ಯೆಯಾಗಿದೆ. ಓವರ್ಸೀಸ್ ಡೆವಲಪ್ಮೆಂಟ್ ಇನ್ಸ್ಟಿಟ್ಯೂಟ್ ಶಿಕ್ಷಣಕ್ಕೆ ಹೆಚ್ಚು ಹಣ ಪಡೆಯುವ ಅಡೆತಡೆಗಳನ್ನು ಹೆಚ್ಚುವರಿಯಾಗಿ, ಟ್ರಾನ್ಸ್ಪರೆನ್ಸಿ ಇಂಟರ್ನ್ಯಾಷನಲ್ ಭ್ರಷ್ಟಾಚಾರ ಪತ್ತೆಹಚ್ಚಿದೆ. ಒಂದು ಅಪಕ್ವವಾದ ನೆರವು ವಾಸ್ತುಶಿಲ್ಪ ಮತ್ತು ಸಮಸ್ಯೆಯನ್ನು ಸಾಕ್ಷಿ ಮತ್ತು ವಕಾಲತ್ತು ಕೊರತೆ ಸೇರಿವೆ ಎಂದು ಸೂಚಿಸಿವೆ. ಆಫ್ರಿಕಾದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಸಾಧಿಸುವ ಒಂದು ಪ್ರಮುಖ ಅಡಚಣೆಯಾಗುತ್ತದೆ. ಇದಲ್ಲದೆ, ಸುಧಾರಿತ ಶೈಕ್ಷಣಿಕ ಪ್ರವೇಶ ಅಭಿವೃದ್ಧಿಶೀಲ ಪ್ರಪಂಚದಲ್ಲಿ ಬೇಡಿಕೆ ವಿದೇಶಿಯರು ನಿರೀಕ್ಷಿಸಲಾಗಿದೆ. ಸ್ಥಳೀಯ ಸರ್ಕಾರಗಳು ಒಳಗೊಂಡಿರುವ ಮರುಕಳಿಸುವ ವೆಚ್ಚ ಪಡೆಯಲು ಇಷ್ಟವಿರುವುದಿಲ್ಲ. ಅಲ್ಪಾವಧಿಯಲ್ಲಿ ಹೆಚ್ಚಾಗಿ ಗಳಿಸಿದ ಹಣ ಶಿಕ್ಷಣದ ದೀರ್ಘಕಾಲದ ಪ್ರಯೋಜನಗಳನ್ನು ಕಡೆಗೆ ತಮ್ಮ ಮಕ್ಕಳಿಗೆ ಆದ್ಯತೆಯನ್ನು ಪೋಷಕರಿಂದ ಆರ್ಥಿಕ ಕೆಲಸದ ಒತ್ತಡ ಇರುತ್ತದೆ. ಸಾಮರ್ಥ್ಯವನ್ನು ಅಭಿವೃದ್ಧಿ, ಸಾಂಸ್ಥಿಕ ಮತ್ತು ಸಂಕೀರ್ಣ ಮಧ್ಯಸ್ಥಿಕೆಗಳು ಅಗತ್ಯವಿದೆ ಕೆಲವು ಸ್ಥಾಪಿತ ತತ್ವಗಳನ್ನು ಎಂದು ಮಾಲಿಕ ಮಟ್ಟವನ್ನು : <poem> ರಾಷ್ಟ್ರೀಯ ನಾಯಕತ್ವ ಮತ್ತು ಮಾಲೀಕತ್ವದ ಯಾವುದೇ ಹಸ್ತಕ್ಷೇಪ ಟಚ್ಸ್ಟೋನ್ ಇರಬೇಕು ; ಯೋಜನೆಗಳು ಸೂಕ್ತ ಮತ್ತು ಸಂದರ್ಭದಲ್ಲಿ ನಿರ್ದಿಷ್ಟ ಸನ್ನಿವೇಶದಲ್ಲಿ ಇರಬೇಕು ; ಅನುಷ್ಠಾನ ಹಂತಗಳಲ್ಲಿ ಮುಂದುವರಿಯಿರಿ ಅಗತ್ಯವಿದೆ ಆದರೂ ಅವರು , ಪೂರಕ ಮಧ್ಯಸ್ಥಿಕೆಗಳು ಸಮಗ್ರ ಸೆಟ್ ಸ್ವಾಗತಿಸುವ ಕಾರ್ಯ ಮಾಡಬೇಕು ; ಕೆಲವು ಅಲ್ಪಾವಧಿಯ ಸಾಧನೆಗಳ ಕಡೆಗೆ ಕೆಲಸ ಮಾಡುವಾಗ ಸಖ , ಸಾಮರ್ಥ್ಯ ಅಭಿವೃದ್ಧಿ ಒಂದು ದೀರ್ಘಕಾಲದ ಬಂಡವಾಳಕ್ಕೆ ಬದ್ಧರಾಗುತ್ತಾರೆ ; ಹೊರಗಿನ ಹಸ್ತಕ್ಷೇಪದ ವಿವಿಧ ಹಂತಗಳಲ್ಲಿ ರಾಷ್ಟ್ರೀಯ ಸಾಮರ್ಥ್ಯಗಳ ಒಂದು ಪರಿಣಾಮ ನಿರ್ಧರಿಸುವಿಕೆ ಮೇಲೆ ಷರತ್ತುಬದ್ಧವಾಗಿ ಇರಬೇಕು ; ವಿದ್ಯಾರ್ಥಿಗಳು ಒಂದು ನಿರ್ದಿಷ್ಟ ಶೇಕಡಾವಾರು ( ಸಾಮಾನ್ಯವಾಗಿ 10 ನೇ ಗ್ರೇಡ್ ನಂತರ , ಶಾಲೆಗಳಲ್ಲಿ ಅಭ್ಯಾಸ ) ಶಿಕ್ಷಣತಜ್ಞರ ಸುಧಾರಣೆಗೆ ತೆಗೆದು ಹಾಕಬಹುದು. ಈಗ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಹೊಂದಿದೆ . ಸಾಮ್ಯತೆ – ವ್ಯವಸ್ಥೆಗಳಲ್ಲಿ ಅಥವಾ ಆಲೋಚನೆಗಳಲ್ಲಿ – ಶಾಲೆಗಳು ಅಂತಾರಾಷ್ಟ್ರೀಯವಾಗಿ ಹಂಚಿಕೊಳ್ಳುವ ಅಂತರಾಷ್ಟ್ರೀಯ ವಿದ್ಯಾರ್ಥಿ ವಿನಿಮಯ ಹೆಚ್ಚಳಕ್ಕೆ ಕಾರಣವಾಯಿತು. ಯುರೋಪಿಯನ್ ಸಾಕ್ರಟೀಸ್ – ಎರಾಸ್ಮಸ್ ಕಾರ್ಯಕ್ರಮದಲ್ಲಿ ಯುರೋಪಿನ ವಿಶ್ವವಿದ್ಯಾನಿಲಯಗಳ ಅಡ್ಡಲಾಗಿ ವಿನಿಮಯ ಸುಗಮಗೊಳಿಸುತ್ತದೆ. ಸೊರೊಸ್ ಫೌಂಡೇಷನ್ ಮಧ್ಯ ಏಷ್ಯಾ ಮತ್ತು ಪೂರ್ವ ಯುರೋಪ್ ವಿದ್ಯಾರ್ಥಿಗಳಿಗೆ ಅನೇಕ ಅವಕಾಶಗಳನ್ನು ಒದಗಿಸುತ್ತದೆ.

ಇಂತಹ ಅಂತಾರಾಷ್ಟ್ರೀಯ ಬ್ಯಕೆಲೌರಿಯೇಟ್ ಎಂದು ಪ್ರೋಗ್ರಾಂಗಳು ಶಿಕ್ಷಣ ಅಂತರರಾಷ್ಟ್ರೀಕರಣ ಕೊಡುಗೆ. ಅಮೆರಿಕನ್ ವಿಶ್ವವಿದ್ಯಾಲಯಗಳ ನೇತೃತ್ವದ ಆನ್ಲೈನ್ ಜಾಗತಿಕ ಕ್ಯಾಂಪಸ್. ನಿಜವಾದ ತರಗತಿಗಳು ಅವಧಿಯಲ್ಲಿ ದಾಖಲಾದ ವರ್ಗ ವಸ್ತುಗಳನ್ನು ಮತ್ತು ಉಪನ್ಯಾಸ ಕಡತ ಗಳನ್ನು ಉಚಿತ ಪ್ರವೇಶವನ್ನು ನೀಡುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಿಕ್ಷಣ ಮತ್ತು ತಂತ್ರಜ್ಞಾನ ಒಎಲ್ಪಿಸಿ ಲ್ಯಾಪ್ಟಾಪ್ ಹೈಟಿ ಮಕ್ಕಳಿಗೆ ಪರಿಚಯಿಸಿದ ತಂತ್ರಜ್ಞಾನ ಬಡ ಪ್ರದೇಶಗಳಲ್ಲಿ ವಾಸಿಸುವ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಜನರಿಗೆ ಶಿಕ್ಷಣ ಪ್ರವೇಶ ಸುಧಾರಣೆ ಹೆಚ್ಚೆಚ್ಚು ಪ್ರಮುಖ ಪಾತ್ರವಹಿಸುತ್ತದೆ. ಉದಾಹರಣೆಗೆ ಮಕ್ಕಳ ಯೋಜನೆಯನ್ನು ಪ್ರತಿ ಒಂದು ಲ್ಯಾಪ್ಟಾಪ್ ಪ್ರತಿಕೂಲತೆಯ ಶೈಕ್ಷಣಿಕ ವಸ್ತುಗಳನ್ನು ನಿಲುಕಿಸಿಕೊಳ್ಳಬಹುದು ಮೂಲಕ ಮೂಲಸೌಲಭ್ಯಗಳ ಒದಗಿಸುವ ಮೀಸಲಾಗಿರುವ ಧರ್ಮಾರ್ಥ ಇವೆ . ಒಎಲ್ಪಿಸಿ ಅಡಿಪಾಯ, ಹಲವಾರು ಪ್ರಮುಖ ನಿಗಮಗಳಿಗೆ ಬೆಂಬಲಿಸಿದರು ಮೀಡಿಯಾ ಲ್ಯಾಬ್ ಔಟ್ ಗುಂಪು ಮತ್ತು , ಶೈಕ್ಷಣಿಕ ತಂತ್ರಾಂಶ ತಲುಪಿಸುವ 100 ಲ್ಯಾಪ್ಟಾಪ್ ಅಭಿವೃದ್ಧಿ ಹೇಳಿಕೆ ಮಿಷನ್ ಹೊಂದಿದೆ. ಲ್ಯಾಪ್ 2008 ವ್ಯಾಪಕವಾಗಿ ಲಭ್ಯವಿರುವಂತೆ. ಅವರು ವೆಚ್ಚದಲ್ಲಿ ಮಾರಾಟ ಅಥವಾ ದೇಣಿಗೆ ಆಧಾರಿತ ವಿದೇಶ ನೀಡಲಾಗುತ್ತದೆ.

ಆಫ್ರಿಕಾದಲ್ಲಿ, ಆಫ್ರಿಕಾದ ಅಭಿವೃದ್ಧಿಗೆ ಹೊಸ ಪಾಲುಗಾರಿಕೆ 10 ವರ್ಷಗಳಲ್ಲಿ ವಸ್ತುಗಳನ್ನು ಮತ್ತು ಅಂತರಜಾಲ ಕಲಿಕೆಯ ಕಂಪ್ಯೂಟರ್ ಸಾಧನದೊಂದಿಗೆ ಎಲ್ಲಾ 600,000 ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಒದಗಿಸಲು "ಇ ಶಾಲಾ ಪ್ರೋಗ್ರಾಂ " ಪ್ರಾರಂಭಿಸಿದೆ. ಒಂದು ಇಂಟರ್ನ್ಯಾಷನಲ್ ಡೆವಲಪ್ಮೆಂಟ್ ಏಜನ್ಸಿ ಯೋಜನೆಯ ಎಂಬ ಮಾಜಿ ಅಮೆರಿಕನ್ ಅಧ್ಯಕ್ಷ ಬಿಲ್ ಕ್ಲಿಂಟನ್ ಬೆಂಬಲ ಪ್ರಾರಂಭವಾಯಿತು. ಸಾಮಾಜಿಕ ಅಭಿವೃದ್ಧಿ ವಿಷಯಗಳ ಬಗ್ಗೆ ವ್ಯಕ್ತಿಗಳು ಸಹಕಾರ ಅವಕಾಶ ಇಂಟರ್ನೆಟ್ ಬಳಸುತ್ತದೆ.

ಭಾರತ ತನ್ನ ವಿದ್ಯಾರ್ಥಿಗಳು ನೇರವಾಗಿ ದೂರ ಶಿಕ್ಷಣ ನೀಡಲು ಭೂಮಿ ಮೂಲದ ದೂರವಾಣಿ ಮತ್ತು ಇಂಟರ್ನೆಟ್ ಮೂಲಭೂತ ಬೈಪಾಸ್ ಎಂದು ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸುತ್ತಿದೆ. 2025 ರಲ್ಲಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಸಂಪರ್ಕ ಉಪಗ್ರಹದ ಒಂದು ಬಹಳ ಕಡಿಮೆ ವೆಚ್ಚದಲ್ಲಿ ದೇಶದ ಜನಸಂಖ್ಯೆಯ ಹೆಚ್ಚು ತಲುಪಬಹುದು. ಶೈಕ್ಷಣಿಕ ವಸ್ತುಗಳನ್ನು ಒದಗಿಸುವ ವ್ಯವಸ್ಥೆಯು ಶುರುವಾಗಬಹುದು. ನೀವೇನು ಅಂತೀರಾ!!!



* * *

। ಶಿವಾನಂದ ಜಂಬಗಿ
ಅಥಣಿ

# ‘ಯೋಗಾಭ್ಯಾಸ ನಿರಂತರವಾಗಿರಲಿ’



**ಬಾಗಲಕೋಟೆ :** ಯೋಗದ ಮಹತ್ವವನ್ನು ವಿದ್ಯಾರ್ಥಿಗಳುಅರಿಯಬೇಕು.ಯೋಗಾಭ್ಯಾಸಒಂದು ದಿನಕ್ಕೆ ಸೀಮಿತವಾಗದೇ ಅದು ನಿರಂತರವಾಗಿ ನಡೆಯಬೇಕುಎಂದುವಿದ್ಯಾ ಪ್ರಸಾರಕ ಮಂಡಳದ ಕಾರ್ಯಾಧ್ಯಕ್ಷೆ ಶ್ರೀಲತಾ ಹೆರಂಜಲಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ವಿವಿಧ ಅಂಗ ಸಂಸ್ಥೆಗಳುಸಕ್ರಿಹೈಸ್ಕೂಲಮೈದಾನದಲ್ಲಿಆಯೋಜಿಸಿದ್ದ ಅಂತಾರಾಷ್ಟ್ರೀಯಯೋಗ ದಿನಾಚರಣೆಯಲ್ಲಿಅವರು ಮಾತನಾಡಿದರು. ಉತ್ತಮ ಬದುಕಿಗೆಯೋಗ ಮಹತ್ವದಾಗಿದ್ದು ವಿದ್ಯಾರ್ಥಿಗಳು ಇದನ್ನುಜೀವನದಲ್ಲಿ ಅಳವಡಿಸಿಕೊಳ್ಳಬೇಕು.ಯೋಗ ಶಿಬಿರಗಳ ಪ್ರಯೋಜನವನ್ನು ಪಡೆಯಬೇಕುಎಂದರು.

ಪದವಿ ಕಾಲೇಜಿನ ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿಆಯುರ್ವೇದ, ಯೋಗ, ಧ್ಯಾನ ಇವುಗಳನ್ನು ಜಗತ್ತಿಗೆ ಪರಿಚಯಿಸಿದ ದೇಶ ನಮ್ಮದು. ಇದರ ಬಗ್ಗೆ ಯುವ ಸಮುದಾಯಅಭಿಮಾನವನ್ನು ಬೆಳೆಸಿಕೊಂಡು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು.

ಚಂಚಲವಾದ ಮನಸ್ಸನ್ನು ನಿಯಂತ್ರಿಸುವದುಅವಶ್ಯ. ಅದಕ್ಕೆಏಕಾಗ್ರತೆ ಬೇಕು. ಇದನ್ನುಯೋಗದಿಂದ ಸಾಧಿಸಬಹುದುಎಂದರು. ಮನಸ್ಸು ಮತ್ತುದೇಹ ‘ಕ್ಕೆಯೋಗಒಂದುಉತ್ತಮ ವ್ಯಾಯಾಮ.ಇದನ್ನು ರೂಢಿಸಿಕೊಂಡಲ್ಲಿ ಉತ್ತಮಆರೋಗ್ಯವನ್ನು ಪಡೆದುಜೀವನದಲ್ಲಿಯೋಗ್ಯ ಸಾಧನೆಯನ್ನು ಮಾಡಬಹುದುಎಂದರು.

ಸಂಸ್ಥೆಯ ಹಳೆಯ ವಿದ್ಯಾರ್ಥಿ ಹಾಗೂ ಪತಂಜಲಿ ಯೋಗ ಪ್ರಶಿಕ್ಷಕ ಪ್ರಶಾಂತಗುಮಾಸ್ತೆಯೋಗಾಸನ ಮತ್ತು ಪ್ರಾಣಾಯಾಮದ ಪ್ರಾತ್ಯಕ್ಷಿಕೆ ನೀಡಿಆರೋಗ್ಯಪೂರ್ಣಜೀವನಕ್ಕೆ ಅವು ಹೇಗೆ ಸಹಕಾರಿಯಾಗಬಲ್ಲವುಎಂದು ವಿದ್ಯಾರ್ಥಿಗಳಿಗೆ ಮನವರಿಕೆಮಾಡಿಕೊಟ್ಟರು. ಬಸ್ತ್ರಿಕಾ ಪ್ರಾಣಾಯಾಮ, ಕಪಾಲಭಾತಿ,ಬಾಹ್ಯ,ಅನುಲೋಮ–ವಿಲೋಮ ಮತ್ತು ಬ್ರಾಹ್ಮರಿ ಪ್ರಾಣಾಯಾಮ ಸಹಿತ ಹಲವು ಆಸನಗಳನ್ನು ಪ್ರದರ್ಶಿಸಿದರು.

ಗೌರವಕಾರ್ಯದರ್ಶಿಡಾ.ಗಿರೀಶಮುಸೂರಕರಅಧ್ಯಕ್ಷತೆ ವಹಿಸಿದ್ದರು. ಡಾ.ಉಮೇಶತಿಮ್ಮಾಪೂರ ನಿರೂಪಿಸಿದರು.ಪ್ರಾಚಾರ್ಯ ಅಶೋಕ ಕಂದಗಲ್ ವಂದಿಸಿದರು. ಉಪಾಧ್ಯಕ್ಷ ಜಿ.ಎನ್.ಕುಲಕರ್ಣಿ,ಸದಸ್ಯ ಡಾ.ಪಿ.ಆರ್.ಜೋಶಿ,ಉಪ ಪ್ರಾಚಾರ್ಯ ಬಿ.ಎಚ್.ಲಮಾಣಿಇದ್ದರು.

# ಯಶಸ್ಸಿಗೆ ಕೇವಲ ಅದೃಷ್ಟ ಅಷ್ಟೇ ಅಲ್ಲ ಅದನ್ನ ಸಾಕಾರಗೊಳಿಸಲು ಅಗತ್ಯ ತಯಾರಿಯೂ ಅಷ್ಟೇ ಮುಖ್ಯ: ಐಶ್ವರ್ಯ ಡಿಕೆಎಸ್ ಹೆಗ್ಡೆ

### ಉತ್ತಮ ಯಶಸ್ಸು ಪಡೆಯಲು ಅದೃಷ್ಟ ಅಷ್ಟೇ ಅಲ್ಲ ಅಗತ್ಯ ತಯಾರಿಯೂ ಮುಖ್ಯ | ಸೌಂದರ್ಯ ಕಂಪೋಸಿಟ್ ಕಾಲೇಜಿನ ಇಗ್ನೈಟ್ ಕಾರ್ಯಕ್ರಮದಲ್ಲಿ ಭಾಗಿ

**ಬೆಂಗಳೂರು :** ಯಶಸ್ಸಿಗೆ ಕೇವಲ ಅದೃಷ್ಟ ಅಷ್ಟೇ ಅಲ್ಲ ಅದನ್ನ ಸಾಕಾರಗೊಳಿಸಲು ಅಗತ್ಯತಯಾರಿಯೂ ಅಷ್ಟೇ ಮುಖ್ಯ ಎಂದು ಗ್ಲೋಬಲ್ ಅಕಾಡೆಮಿ ಅಫ್ ಟೆಕ್ನಾಲಜಿಯ ವ್ಯವಸ್ಥಾಪಕ ನಿರ್ದೇಶಕರಾದ ಐಶ್ವರ್ಯ ಡಿಕೆಎಸ್ ಹೆಗ್ಡೆ ಅಭಿಪ್ರಾಯಪಟ್ಟರು.

ಇಂದು ಹೆಸರುಘಟ್ಟ ರಸ್ತೆಯಲ್ಲಿ ಇರುವ ಸೌಂದರ್ಯ ಕಾಂಪೋಸಿಟ್ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಒರಿಯೆಂಟೇಶನ್ ಕಾರ್ಯಕ್ರಮ ಇಗ್ನೈಟ್ 2024 ಗೆ ಚಾಲನೆ ನೀಡಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಮಾತನಾಡಿದರು.



ಜೀವನದಲ್ಲಿ ಶಿಕ್ಷಣ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉತ್ತಮ ಶಿಕ್ಷಣ ನಮ್ಮ ಉತ್ತಮ ಜೀವನದ ಗಟ್ಟಿ ಬೇರುಗಳಾಗಿವೇ. ಸೌಂದರ್ಯ ಶಿಕ್ಷಣ ಸಂಸ್ಥೆ ಗಳಂತಹ ಉತ್ತಮ ಸಂಸ್ಥೆಗಳು ನಮ್ಮ ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದೆ. ನಮ್ಮ ಮಕ್ಕಳು ತಮ್ಮ ಸರ್ವತೋಮುಖ ಬೆಳವಣಿಗೆಯತ್ತ ಗಮನ ಹರಿಸಬೇಕು. ಈ ಬೆಳವಣಿಗೆಯಲ್ಲಿ ಪೋಷಕರದ್ದು ಹಾಗೂ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ಯಾವುದೇ ಕ್ಷೇತ್ರದಲ್ಲಾದರೂ ಕೂಡಾ ಯಶಸ್ಸು ಪಡೆಯಲು ಕೇವಲ ಅದೃಷ್ಟ ಸಾಕಾಗಲ್ಲ. ಅದೃಷ್ಟದಿಂದದೊರೆತಂತಹಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಅಗತ್ಯ ತಯಾರಿ ಮಾಡಿಕೊಳ್ಳುವುದು ಬಹಳ ಮುಖ್ಯ. ಸೋಲನ್ನ ಗೆಲುವಿನ ಮೆಟ್ಟಿಲಾಗಿ ಪರಿವರ್ತಿಸಿಕೊಳ್ಳುವ ಮನಸ್ಥಿತಿಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಪ್ರತಿ ದಿನವೂ ಒಂದು ಹೊಸ ಅವಕಾಶವನ್ನ ನಮ್ಮ ಮುಂದೆ ತೆರೆದಿಡುತ್ತದೆ. ನನ್ನ ತಂದೆಯವರು ಯಾವಾಗಲೂ ಹೇಳುವ ಮಾತುಗಳಾದ "ದೇವರು ವರವನ್ನೂ ಕೊಡುವುದಿಲ್ಲ ಶಾಪವನ್ನೂ ಕೊಡುವುದಿಲ್ಲ – ಕೇವಲ ಅವಕಾಶವನ್ನು ಕೊಡುತ್ತಾನೆ. ಅದರ ಸದುಪಯೋಗ ಅಥವಾ ದುರಪಯೋಗ ನಮ್ಮ ಪ್ರಯತ್ನದಲ್ಲಿದೆ". ಅದನ್ನ ನಾನು ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ನಮ್ಮ ಕೌಶಲ್ಯಗಳನ್ನ ವೃದ್ಧಿಸಿಕೊಳ್ಳುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಹೊಸ ಅವಕಾಶಗಳನ್ನು ಯಸಸ್ಸಾಗಿ ಪರಿವರ್ತಿಸಿಕೊಳ್ಳಲು ಅನುವು ಮಾಡಿಕೊಡುತ್ತವೆ. ಪ್ರಯತ್ನದ ಸಂಧರ್ಭದಲ್ಲಿ ಯಾರೂ ನಮ್ಮನ್ನು ಶ್ಲಾಘಿಸುವುದಿಲ್ಲ, ಆದರೆ ನಿರಂತರ ಪ್ರಯತ್ನ ನಮ್ಮನ್ನ ಒಂದು ದಿನ ಯಶಸ್ಸಿನ ಮೆಟ್ಟಿಲನ್ನು ಹತ್ತಿಸುತ್ತದೆ. ಹಾಗೆಯೇ ಶ್ಲಾಘನೆಗೂ ಪಾತ್ರರಾಗುವಂತೆ ಮಾಡುತ್ತದೆ ಎಂದರು.

**ಸಂವಹನ ಬಹಳ ಮುಖ್ಯ:**

ಮೊಬೈಲ್ ನಂತಹ ಆಧುನಿಕ ಸಂಪರ್ಕ ಸಾಧನಗಳು ನಮ್ಮ ಮನೆಯಲ್ಲಿನ ಸಂವಹನವನ್ನ ಕಡಿಮೆ ಮಾಡಿವೆ. ಮಕ್ಕಳು ತಮ್ಮ ಪೋಷಕರೊಂದಿಗೆ, ಪೋಷಕರು ತಮ್ಮ ಮಕ್ಕಳೊಂದಿಗೆ ಮಾತನಾಡುವ ಹಾಗೂ ಆಲಿಸುವ ನಿಟ್ಟಿನಲ್ಲಿ ಸಂವಹನ ಬೆಳಿಸಿಕೊಳ್ಳಬೇಕು. ಮಕ್ಕಳ ತಮ್ಮೊಂದಿಗೆ ನಿರಂತರ ಸಂವಹನಕ್ಕೆ ಪೋಷಕರು ಅನುವು ಮಾಡಿಕೊಡಬೇಕು. ಇದರಿಂದ ಮಕ್ಕಳು ಹೊರ ಪ್ರಪಂಚದ ಜೊತೆ–ಯೂ ಉತ್ತಮವಾಗಿ ತಮ್ಮ ಸಂಪರ್ಕ ಹಾಗೂ ಸಂವಹನ ಇಟ್ಟುಕೊಳ್ಳಲು ಸಾಧ್ಯ. ಉತ್ತಮ ಕಮ್ಯೂನೀಕೇಷನ್ ಸ್ಕಿಲ್ಸ್‌ಗಳಿಂದ ಹೆಚ್ಚಿನದ್ದನ್ನು ಸಾಧಿಸಲು ಸಾಧ್ಯ ಎಂದರು.

ಸೌಂದರ್ಯ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್‌ನ ಸಂಸ್ಥಾಪಕರಾದ ಸೌಂದರ್ಯ ಪಿ ಮಂಜಪ್ಪ ಮಾತನಾಡಿ, ಜೀವನ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹಳಷ್ಟು ಹಿರಿದಾಗಿದೆ. ಶಿಕ್ಷಕರು ಹಾಗೂ ಸಿಬ್ಬಂದಿಗಳ ಅಪಾರ ಶ್ರಮದಿಂದ ಸೌಂದರ್ಯ ಕಾಂಪೋಸಿಟ್ ಕಾಲೇಜು ಕಳೆದ 18 ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದೆ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಕೆಲವೊಮ್ಮೆ ಕಠಿಣವಾದ ನಿರ್ಧಾರಗಳನ್ನು ಶಿಕ್ಷಕರು ತಗೆದುಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ಅಂತಹ ಸಂಧರ್ಭಗಳಲ್ಲಿ ಪೋಷಕರು ಶಿಕ್ಷಕರ ಜೊತೆ ನಿಲ್ಲಬೇಕು ಎಂದರು.

ಸೌಂದರ್ಯ ಗ್ರೂಪ್ ಆಫ್ ಇನ್ಸಿಟ್ಯೂಷನ್ ನ ಸಿಇಒ ಕೀರ್ತನ್ ಕುಮಾರ್ ಮಾತನಾಡಿ, ಉತ್ತಮ ಭವಿಷ್ಯವನ್ನ ರೂಪಿಸುವ ನಿಟ್ಟಿನಲ್ಲಿ ಉತ್ತಮ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಬಹಳಷ್ಟು ಹೊಸ ಕ್ರಮಗಳನ್ನು ಅಳವಡಿಸಿಕೊಳ್ಳುತ್ತಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಐಐಟಿ, ಎನ್ಐಟಿ ಯಂತಹ ಸಂಸ್ಥೆಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆದುಕೊಳ್ಳಲು ಅನುವು ಮಾಡಿಕೊಟ್ಟಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದರು. ಎರಡು ವರ್ಷಗಳ ಶಿಸ್ತಿನ ಅಧ್ಯಯನ ಜೀವನದಲ್ಲಿ ಬಹಳಷ್ಟು ಸಾಧಿಸಲು ಅನುವು ಮಾಡಿಕೊಡಲಿದೆ ಎಂದರು.

ಪಿಯುಸಿ, ಜೆಇಇ ಹಾಗೂ ಸಿಇಟಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಇದೇ ವೇಳೆ ಲ್ಯಾಪ್‌ಟಾಪ್ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸೌಂಧರ್ಯ ಎಜುಕೇಷನಲ್ ಟ್ರಸ್ಟ್‌ನ ಟ್ರಸ್ಟಿಗಳಾದ ವರುಣ್ ಕುಮಾರ್, ಡಾ. ಪ್ರತಿಕ್ಷಾ ಎಸ್ ಕೀರ್ತನ್, ನಿಶ್ಮಿತಾ ವರುಣ್, ಪ್ರಾಂಶುಪಾಲರಾದ ಕ್ಯಾಪ್ಟನ್ ಮಹಾಬಲೇಶ್ವರ ತುಂಗಾ ಸೇರಿದಂತೆ ಪೋಷಕರು ಹಾಗೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಯೋಗ ನಮ್ಮ ಸನಾತನ ಧರ್ಮದಿಂದ ಬಂದಿದ್ದು



**ಮೂಡಲಗಿ :** ಮನುಕುಲಕ್ಕೆ ಯೋಗ ಎಂಬುದು ಪತಂಜಲಿ ಮಹರ್ಷಿಗಳಿಂದ ಬಳುವಳಿಯಾಗಿ ಬಂದಿದೆ ಇಡಿ ವಿಶ್ವವೇ ಭಾರತದಂತ ತಿರುಗಿ ನೋಡುತ್ತಿದೆ ಸರ್ವರಿಗೂ ಆರೋಗ್ಯದ ಭಾಗ್ಯ ನೀಡುವ ಯೋಗ ನಮ್ಮ ಸನಾತನ ಧರ್ಮದಿಂದ ಬಂದಿದ್ದು ಭಾರತ ಈಗ ವಿಶ್ವಕ್ಕೆ ಗುರುಸ್ಥಾನವಹಿಸಿಕೊಳ್ಳುತ್ತಿದೆ ಎಂದು ಶ್ರೀ ಕೃಷ್ಣ ಧ್ಯಾನ ಯೋಗ ಪೀಠದ ಸಂಸ್ಥಾಪಕ ದಯಾನಂದ ಸವದಿ ಹೇಳಿದರು,

ಶುಕ್ರವಾರ ಮೂಡಲಗಿ ತಹಶೀಲ್ದಾರ ಕಛೇರಿಯಲ್ಲಿ ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಯೋಗ ಯೋಗ ಶಿಬಿರ ನಡೆಸಿಕೊಟ್ಟು ಮತ್ತು ಯೋಗ ಉಪನ್ಯಾಸ ನೀಡಿ ಮಾತನಾಡಿದರು,

ವಿಶ್ವದ ಜನ ನಮ್ಮ ಯೋಗ ವಿಧ್ಯೆಗೆ ಮಾರುಹೋಗಿದ್ದಾರೆ ಮತು ಅನುಸರಿಸುತಿದ್ದಾರೆ ವಿಜ್ಞಾನವನ್ನು ಮೀರಿದ ಅಗಾದವಾದ ಶಕ್ತಿ ನಮ್ಮ ಯೋಗದಲ್ಲಿದೆ ಯೋಗದಿಂದ ಆರೋಗ್ಯ ಅಷ್ಟೆ ಅಲ್ಲಾ ಎಲ್ಲವನ್ನು ಗೆಲ್ಲುವ ಆತ್ಮಶಕ್ತಿ ಜಾಗೃತಗೊಳ್ಳುತ್ತದೆ ಎಂದರು. ತಹಸೀಲ್ದಾರ ಮಹಾದೇವ ಸನ್ನಮೂರಿ ಸಸಿಗೆ ನೀರುರಿಸುವ ಮೂಲಕ ಯೋಗ ಶಿಬಿರ ಉದ್ಘಾಟಿಸಿ ಮಾತನಾಡಿ, ಎಲ್ಲರು ಮುಕ್ತವಾಗಿ ಯೋಗವನ್ನು ಮಾಡಬೇಕು ಇವತು ವಿಶ್ವದೆಲ್ಲಡೆ ಯೋಗ ದಿನಾಚರಣೆಯ ಆಚರಿಸಲಾಗುತಿದೆ ಆರೋಗ್ಯಕ್ಕೆ ಯೋಗ ವಂದೆ ದಿವ್ಯೌಷಧ ಆಯುಷ್ಯ ವೃದ್ದಿಯ ಜೊತೆಗೆ ಅಧ್ಯಾತ್ಮದ ಅರಿವು ಮೋಕ್ಷದ ಕಲ್ಪನೆಯು ಮೂಡಿ ಮಾನವನ ಬದುಕಿಗೆ ಪರಿಪೂರ್ಣ ಅರ್ಥ ನೀಡುತ್ತದೆ.



## ಸ್ವಂತಕ್ಕಾಗಿಮತ್ತುಸಮಾಜಕ್ಕಾಗಿಯೋಗದಿನಾಚರಣೆ

**ಮೂಡಲಗಿ :** ಸ್ವಂತಕ್ಕಾಗಿ ಮತ್ತು ಸಮಾಜಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಈ ವರ್ಷದ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಯೋಗದಿಂದ ರೋಗವನ್ನು ದೂರ ಮಾಡಿ ಸ್ವಸ್ತ, ಸದೃಢ, ಸಮಾಜ ಕಟ್ಟಲು ಸಾಧ್ಯವಿದೆ. ಹೀಗಾಗಿ ಪ್ರತಿಯೊಬ್ಬರು ಪ್ರತಿದಿನ ಯೋಗ ಮಾಡಿ ಸುಂದರ ಆರೋಗ್ಯಯುತ ಜೀವನ ರೂಪಿಸಿಕೊಳ್ಳಲು ಕಂಕಣಬದ್ಧರಾಗಬೇಕೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು. ಭಾರತೀಯ ನೆಲದ ಋಷಿಮುನಿಗಳಿಂದ ಪ್ರಾರಂಭವಾದ ಯೋಗಾಭ್ಯಾಸವನ್ನು ಆಧುನಿಕ ಜಗತ್ತಿನ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋದ ಜನರು ಮರೆತೆ ಬಿಟ್ಟಿದ್ದರು. ಆದರೆ ಕಳೆದ ಹತ್ತು ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಅವರ ವಿಶೇಷ ಪರಿಶ್ರಮ ಮತ್ತು ಕಾಳಜಿಯ ಪರಿಣಾಮವಾಗಿ ಇಡಿ ವಿಶ್ವಕ್ಕೆ ಯೋಗವನ್ನು ಪರಿಚಯಿಸಿದ ಹಿರಿಮೆ ಭಾರತಕ್ಕಿದೆ. ಇಂದು ಇಡಿ ಜಗತ್ತಿನ ಜನ ಭಾರತದ ಯೋಗವನ್ನು ಅನುಸರಿಸುತ್ತಿದ್ದಾರೆ. ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಯೋಗದ ಮಹತ್ವವನ್ನು ಜಗತ್ತಿಗೆ ಸಾರುವ ಮೂಲಕ ನಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ಆರೋಗ್ಯಪೂರ್ಣ ಸಮಾಜ ಕಟ್ಟುವ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕಾಗಿ ವಿನಂತಿಸಿದರು.

## ಗುರುಪಾದಪ್ಪ ಬಳಿಗಾರ ನಿಧನ



**ಮೂಡಲಗಿ :** ಸಮೀಪದ ಕೌಜಲಗಿ ಪಟ್ಟಣದ ಮಾದರಿ ಶಿಕ್ಷಣ ಸಂಸ್ಥೆಯ ಅಂಬರೀಶ ವರ್ಮ ದೇಸಾಯಿ ಪ್ರೌಢಶಾಲೆಯ ಆಡಳಿತ ಮಂಡಳಿಯ ನಿರ್ದೇಶಕ ಗುರುಪಾದಪ್ಪ ಮಹದೇವಪ್ಪ ಬಳಿಗಾರ (60) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

# ಕ್ರೀಡಾ ವಿದ್ಯಾರ್ಥಿವೇತನಕ್ಕೆ ಅರ್ಜಿ

**ಬಾಗಲಕೋಟೆ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2023–24ನೇ ಸಾಲಿನ ಪ್ರತಿಭಾವಂತ ಮಾಧ್ಯಮಿಕ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಾರ್ಷಿಕ 10 ಸಾವಿರ ರೂ.ಗಳ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿವೇತನ ನೀಡುವ ಸಲುವಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಮಾಧ್ಯಮಿಕ ಪ್ರೌಢಶಾಲೆಯಲ್ಲಿ ಓದುತ್ತಿರುವ ಕ್ರೀಡಾಪಟುಗಳು ಎಪ್ರೀಲ್ 1, 2023 ರಿಂದ ಮಾರ್ಚ 31, 2024 ವರೆಗೆ ಇಲಾಖೆಯಿಂದ ನಡೆಸಿದ ಕ್ರೀಡಾಕೂಟ, ರಾಷ್ಟ್ರೀಯ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿ ಭಾಗವಹಿಸಿದಲ್ಲಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಪ್ರಥಮ ಸ್ಥಾನ ಇಲ್ಲವೇ ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಮಾತ್ರ ಅರ್ಹರಾಗಿರುತ್ತಾರೆ. ಅರ್ಜಿಯನ್ನು ವೆಬ್‌ಸೈಟ್ http://sevasindhuservices.karnataka.gov.in ಮೂಲಕ ಜೂನ್ 30 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ.08354–235896, 9739722700, 9945284771ಗೆ ಸಂಪರ್ಕಿಸುವಂತೆ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ತಿಳಿಸಿದ್ದಾರೆ.

# ತೋವಿವಿಯಲ್ಲಿ 3 ದಿನಗಳ ಕಾಲ ಸಸ್ಯ ಸಂತೆ

**ಬಾಗಲಕೋಟೆ :** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಜೂನ್ 24 ರಿಂದ 3 ದಿನಗಳ ಕಾಲ ಸಸ್ಯ ಸಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಸ್ಯ ಸಂತೆಯಲ್ಲಿ ಉತ್ತಮ ಗುಣಮಟ್ಟದ ವಿವಿಧ ತಳಿಗಳ ಹಣ್ಣಿನ ಬೆಳೆಗಳಾದ ಮಾವು, ನಿಂಬೆ, ಹುಣಸೆ, ಸೀತಾಫಲ, ಪೇರಲ, ನೇರಳೆ ಇನ್ನಿತರ ಅಲಕಾಂರಿಕ ಸಸಿಗಳು, ಔಷಧಿ ಹಾಗೂ ಸುಗಂಧ ಸಸಿಗಳು, ತೋಟಪಟ್ಟಿ ಸಸಿಗಳು, ಉತ್ತಮ ಗುಣಮಟ್ಟದ ಬೀಜಗಳು, ಜೈವಿಕ ಗೊಬ್ಬರ, ಎರೆಹುಳು ಗೊಬ್ಬರ, ವಿಶ್ವವಿದ್ಯಾಲಯದ ಪ್ರಕಟಣೆಗಳು ಹಾಗೂ ಎಲ್ಲಾ ಬೆಳೆಗಳನ್ನು ಒಳಗೊಂಡ ತೋಟಗಾರಿಕಾ ಕೈಪಿಡಿ ಮಾರಾಟಕ್ಕೆ ಯೋಗ್ಯ ದರದಲ್ಲಿ ಲಭ್ಯವಿದ್ದು, ರೈತ ಭಾಂದವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತೋಟಗಾರಿಕೆ ವಿವಿಯ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಡಾ.ಎಂ.ಎಸ್.ಲೋಕೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಡಾ.ಆನಂದ ನಂಜಪ್ಪನವರ (9845320045) ಮತ್ತು ಅರುಣಕುಮಾರ ಕಾಂಬಳೆ (8618593856, 9482869249)ಗೆ ಸಂಪರ್ಕಿಸಬಹುದಾಗಿದೆ.

# ಎಸ್.ಎನ್. ಮೆಡಿಕಲ್ ಕಾಲೇಜಿನಲ್ಲಿ ಯೋಗದಿನಾಚರಣೆ

## ಯೋಗದಿಂದ ಮಹಿಳೆಯ ದೈಹಿಕ ಮತ್ತು ಮಾನಸಿಕ ಸದೃಢತೆ ಸಾಧ್ಯ: ಅಶೋಕ ಸಜ್ಜನ

**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ‘ಮಹಿಳಾ ಸಬಲೀಕರಣಕ್ಕಾಗಿ ಯೋಗ’ ಎನ್ನುವ ಘೋಷಣೆಯೊಂದಿಗೆ 10 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಪಿ.ಎಮ್.ಎನ್.ಎಮ್ ದಂತ ಮಹಾವಿದ್ಯಾಲಯ, ಸಜ್ಜಲಶ್ರೀ ನರ್ಸಿಂಗ್ ಕಾಲೇಜ್ ಮತ್ತು ಫಿಜಿಯೋಥೆರಪಿ ಕಾಲೇಜು ಇವುಗಳ ಸಹಯೋಗದೊಂದಿಗೆ ಆಚರಿಸಲಾಯಿತು.



ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ) ಬೆಳಗ್ಗೆ 6.30 ಕ್ಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ‘ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರ ಮಾರ್ಗದರ್ಶನ ಮತ್ತು ನಿರ್ದೇಶನದನ್ವಯ ಮೆಡಿಕಲ್ ಕಾಲೇಜಿನ ಕ್ರೀಡಾಂಗಣದಲ್ಲಿ ಯೋಗದಿನಾಚರಣೆ ಆಚರಿಸಲಾಗುತ್ತಿದೆ. ಈ ವರ್ಷದ ಯೋಗದಿನಾಚರಣೆಯ ಧ್ಯೇಯವಾಕ್ಯದಲ್ಲಿ ಮಹಿಳೆಗೆ ಪ್ರಾಶಸ್ತ್ಯ ನೀಡಿರುವುದು ಅತ್ಯಂತ ಅಭಿಮಾನದ ಸಂಗತಿ. ಯೋಗದಿಂದ ಮಹಿಳೆಯ ದೈಹಿಕ ಮತ್ತು ಮಾನಸಿಕ ಸದೃಢತೆ ಸಾಧ್ಯ. ಮಹಿಳಾ ಸಬಲೀಕರಣದಲ್ಲಿ ಯೋಗದ ಪಾತ್ರ ಮತ್ತು ಕೊಡುಗೆ ಅನನ್ಯ’ ಎಂದು ಹೇಳಿದರು.

ವೈದ್ಯರಾದ ಡಾ.ಸಂಗಪ್ಪ ದೊಡ್ಡಮನಿ, ಡಾ.ಹಿರಣ್ಮಯಿ ಬ್ರಿಡ್ ಮತ್ತು ದೈಹಿಕ ನಿರ್ದೇಶಕ ಡಾ.ವಿಜಯಕುಮಾರ ಹಿರೇಮಠ ಯೋಗಕಾರ್ಯಕ್ರಮವನ್ನು ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಸದಸ್ಯರಾದ ವೀರಣ್ಣ ಹಲಕುರ್ಕಿ, ಮಹೇಶ ಅಂಗಡಿ, ಅಶೋಕ ಕಲ್ಯಾಣ ಶೆಟ್ಟರ, ಶರಣ್ ನಾವಲಗಿ, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ.ಅಶೋಕ ಮಲ್ಲಾಪೂರ, ವೈದ್ಯಕೀಯ ಅಧೀಕ್ಷಕಿ ಡಾ.ಭುವನೇಶ್ವರಿ ಯಳಮಲಿ, ಡೆಂಟಲ್ ಕಾಲೇಜ್ ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ, ಸಜ್ಜಲಶ್ರೀ ನರ್ಸಿಂಗ್ ಕಾಲೇಜ್ ಪ್ರಾಚಾರ್ಯ ಡಾ.ದಿಲೀಪ ನಾಟೇಕರ್, ಶಾರದಾಂಬ ನರ್ಸಿಂಗ್ ಕಾಲೇಜ್ ಪ್ರಾಚಾರ್ಯ ಡಾ.ಪ್ರವೀಣ ಪಾಟೀಲ, ಎಲ್ಲ ವಿಭಾಗಗಳ ಮುಖ್ಯಸ್ಥರು, ವೈದ್ಯರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

### ಅಂತರರಾಷ್ಟ್ರೀಯ ಯೋಗ ದಿನಾಚರಣೆ

# ಬಿ.ವ್ಹಿ.ವ್ಹಿ.ಸಂಘದ ಮೈದಾನದಲ್ಲಿ ಯೋಗ ಮಂತ್ರ ಪಠಿಸಿ ಸಾಮೂಹಿಕ ಯೋಗ

## ಆಯುರ್ವೇಧಿಕ ಹಾಗೂ ಕಲಾ ಮಹಾವಿದ್ಯಾಲಯ ವಿದ್ಯಾರ್ಥಿಗಳ ಅಡ್ವಾನ್ಸ್ ಯೋಗ ಪ್ರದರ್ಶನ









**ಬಾಗಲಕೋಟೆ:** ಸ್ವಯಂಮತ್ತುಸಮಾಜಕ್ಕಾಗಿ ಯೋಗ ಘೋಷವಾಕ್ಯದೊಂದಿಗೆ ನಡೆದ 10ನೇಅಂತರಾಷ್ಟ್ರಿಯಯೋಗದಿನಾಚರಣೆ, ಅಂಗವಾಗಿ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಆವರಣದಲ್ಲಿ ದೇಶದ ಐಕ್ಯ ಮಂತ್ರ ಪಠಿಸಿ ಸಾಮೂಹಿಕ ಯೋಗ ಪ್ರದರ್ಶ ಮಾಡಲಾಯಿತು.

ಬಿವಿವಿ ಸಂಘದ ಕಲಾ,ವಿಜ್ಞಾನ, ವಾಣಿಜ್ಯ, ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಆಯುರ್ವೇದಿಕ್, ಹೋಮಿಯೋಪತಿ ಕಾಲೇಜುಗಳು ಹಾಗೂ ನರ್ಸಿಂಗ್, ಪಾಲಿಟಡಕ್ನಿಕ್, ಅಕ್ಕಮಹಾದೇವಿ ಕಾಲೇಜು,ಪ್ರಾಥಮಿಕ ಹಾಗು ಪ್ರೌಡಶಾಲೆಗಳ ಸಹಯೋಗದಲ್ಲಿ 45 ನಿಮಿಷಗಳ ಕಾಲ ವಿವಿಧ ಆಸನಗಳನ್ನು ಪ್ರದರ್ಶಿಸುವ ಮುಲಕ ಯೋಗ ಮಹತ್ವವನ್ನು ಸಾರಿದರು, ಪ್ರದರ್ಶನದಲ್ಲಿ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿದಂತೆ 4ಸಾವಿರಕ್ಕಿಂತ ಹೆಚ್ಚಿನ ಜನರು ಪಾಲ್ಗೊಳ್ಳುವುದರ ಮೂಲಕ ತಾಡಾಸನ, ಮನಸ್ಸು ಶಾಂತವಾಗಿಟ್ಟುಕೊಳ್ಳುವ ವೃಕ್ಷಾಸನ, ಪಾದ ಹಸ್ತಾಸನ, ಅರ್ಧ ಚಕ್ರಾಸನ, ದಂಡಾಸನ, ಭದ್ರಸಾನ, ವಜ್ರಾಸನ,ಉತ್ಥಾಸನಮಂಡೊಕ ಾಸನ,ವಕ್ರಾಸನ,ಭುಜಂಗಾಸನ,ಶಲಭಾಸನ, ಸೇತುಬಂಧಾಸನ, ಉತ್ಥಾನಪಾದಾಸನ, ಶವಾಸನ, ಪ್ರಾಣಯಾಮ ಸೇರಿದಂತೆ ವಿವಿಧ ಆಸನಗಳನ್ನು ಆಯುರ್ವೇದಿಕ ಮಹಾವಿದ್ಯಾಲಯ ಡಾ.ಆರ್.ಬಿ.ಹೊಸಮನಿ ಅವರ ತಂಡದಿಂದ ಯೋಗ ನಿರ್ದೇಶನದಲ್ಲಿ ಯೋಗ ಪ್ರದರ್ಶಿಸಲಾಯಿತು.


ಗಮನಸೇಳೆದ ಅಡ್ವಾನ್ಸ್ ಯೋಗ ಪ್ರದರ್ಶನ: ಆಯುರ್ವೇದಿಕ್ ಹಾಗೂ ಕಲಾ ಮಹಾವಿದ್ಯಾಲಯ ವಿದ್ಯಾರ್ಥಿಗಳಿಂದ ಅಡ್ವಾನ್ಸ್ ಯೋಗ ಪ್ರದರ್ಶನ ಎಲ್ಲರ ಗಮನ ಸೇಳೆಯಿತು.

ಕಾರ್ಯಕ್ರಮದಲ್ಲಿ ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜುಗಳ ಆಡಳಿತ ಮಂಡಳಿಗಳ ಕಾರ್ಯಾಧ್ಯಕ್ಷ ಗುರುಬಸವ ಸೂಳಿಬಾವಿ, ಆಯುಷ್ ವೈದ್ಯಕಿಯ ಕಾಲೇಜುಗಳ ಮತ್ತು ಔಷದ ವಿಜ್ಞಾನ ಕಾಲೇಜಿನ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ, ಹೈಸ್ಕೂಲ್ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ಸಂಘದ ಸದಸ್ಯರು, ಬಿಟಿಡಿಎ ಮಾಜಿ ಅಧ್ಯಕ್ಷ ಜಿ.ಎನ್.ಪಾಟೀಲ.ಸಿದ್ದರಾಮ ಮನಹಳ್ಳಿ, ಸಂಘದ ಆಡಳಿತಾಧಿಕಾರಿಗಳಾದ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಸೇರಿದಂತೆ ವಿವಿಧ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇನ್ನು ನವನಗರದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಹಾಗೂ ಹಾನಗಲ್ ಕುಮಾರೇಶ್ವರ ಆಸ್ಪತ್ರೆ ಅವರಣದಲ್ಲಿ ನಡೆದ ಯೋಗಕಾರ್ಯಕ್ರಮದಲ್ಲಿ ಬಿವಿವಿ ಸಂಘದ ವೈದ್ಯಕೀಯ ಮಹಾ ವಿದ್ಯಾಲಯಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಶ್ರೀ ಅಶೋಕ ಸಜ್ಜನ (ಬೇವೂರ) ನೇತೃತ್ವ ವಹಿಸಿದ್ದರು, ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ದಂತ ಮಹಾವಿದ್ಯಾಲಯ, ನರ್ಸಿಂಗ್ ಕಾಲೇಜು, ಫಿಸಯೋಥೆರೇಪಿ ಕಾಲೇಜುಗಳ ಪ್ರಾಚಾರ್ಯರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಯೋಗ ಪರಿಣಿತ ವೈದ್ಯರಾದ ಡಾ.ಅಶೋಕ ಬಡಕಲಿ, ಡಾ.ಎಸ್.ಎಸ್. ದೊಡ್ಡಮನಿ ಮತ್ತುಡಾ.ಹಿರನ್ಮಯಿ ಬ್ರಿಡ್ ನಿರ್ದೇಶನ ಮತ್ತು ಪ್ರದರ್ಶನ ನೀಡಿದರು.

ಅದರಂತೆ ವಿದ್ಯಾಗಿರಿಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಬಿವಿವಿ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಮಹೇಶ ಅಥಣಿ ನೇತೃತ್ವದಲ್ಲಿ ವಿವೇಕಾನಂದ ಯೋಗ ವಿಜ್ಞಾನ ಕೇಂದ್ರದ ಸಂಗಣ್ಣ ಕುಪ್ಪಸ್ತ ತಂಡವು ಈ ಯೋಗ ಪ್ರದರ್ಶನದ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು. ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರು, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು, ಸಾರ್ವಜನಿಕರು ಸಾವರಾರುಸಂಖ್ಯೆಯಲ್ಲಿಪಾಲ್ಗೊಂಡಿದ್ದರು. ಈ ಮೂರು ಮೈದಾನದಲ್ಲಿ 10 ಸಾವರಕ್ಕು ಹೆಚ್ಚು ಜನ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

# ಯೋಗದಿಂದ ದೈಹಿಕ ಮತ್ತು ಮಾನಸಿಕವಾಗಿ ಸದೃಡತೆ: ಡಾ.ಕೆ.ಎಮ್.ಅವರಾದಿ



**ಮಹಾಲಿಂಗಪುರ :** ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪದವಿ ಕಾಲೇಜಿನಲ್ಲಿ ಕ್ರೀಡಾ ವಿಭಾಗ, ಎನ್‌ಎಸ್‌ಎಸ್ ಘಟಕ ಹಾಗೂ ರೆಡ್‌ಕ್ರಾಸ್ ವಿಂಗ್ ವತಿಯಿಂದ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗಿತ್ತು.

ಅಧ್ಯಕ್ಷತೆವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ಎಮ್.ಅವರಾದಿಯವರು ಯೋಗ ದಿನದ ಆಚರಣೆಯ ಮಹತ್ವ, ವಿದ್ಯಾರ್ಥಿ ಜೀವನದಲ್ಲಿ ಯೋಗದ ಅನುಕೂಲತೆಗಳು ಹಾಗೂ ಯೋಗದಲ್ಲಿ ವಿಶ್ವಗುರು ಭಾರತದ ಪಾತ್ರವನ್ನು ಕುರಿತು ತಿಳಿಸಿ, ಮನುಷ್ಯ ಪ್ರತಿ ದಿನ ಯೋಗ ಮಾಡುವುದರಿಂದ ದೈಹಿಕ ಮತ್ತು ಮಾನಸಿಕವಾಗಿ ಸದೃಡವಾಗಿರುತ್ತಾರೆ ಎಂದರು.

ಕ್ರೀಡಾ ವಿಭಾಗದ ನಿರ್ದೇಶಕರಾದ ಪಿ.ಎಸ್.ಹಿಪ್ಪರಗಿ ಅವರು ಯೋಗಾಸನದ ವಿವಿಧ ಪ್ರಮುಖ ಆಸನಗಳ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.ಎನ್‌ಎಸ್‌ಎಸ್ ಘಟಕದ ಅಧಿಕಾರಿಗಳಾದ ಪಿ.ಎಮ್.ಗೌಳಿ, ರೆಡ್‌ಕ್ರಾಸ್ ವಿಂಗ್‌ನ ಅಧಿಕಾರಿಗಳಾದ ಟಿ.ಡಿ.ಡಂಗಿ, ಸಿ.ಎಮ್.ಐಗಳಿ, ಡಿ.ಬಿ.ಧರಿಗೌಡರ, ವಿ.ಟಿ.ಬಡಿಗೇರ, ಎಸ್.ಎಸ್.ಹಳಿಂಗಳಿ, ಆರ್.ವ್ಹಿ.ಚೌಗಲಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ತೋವಿವಿಯ 3 ದಿನಗಳ ಸಸ್ಯ ಸಂತೆಗೆ ಚಾಲನೆ | ವಿವಿಧ ತಳಿ ಸಸಿಗಳ ಮಾರಾಟ

# ಜಾಗತಿಕ ಮಟ್ಟದಲ್ಲಿ ಇಲ್ಲಿಯ ತರಕಾರಿ ಮಾರಾಟವಾಗಲಿ: ತಿಮ್ಮಾಪೂರ



**ಬಾಗಲಕೋಟೆ:** ವಿಶೇಷ ಔಷಧಿ ಗುಣಗಳುಳ್ಳ ತರಕಾರಿಗಳತ್ತ ಜನ ವಾಲುತ್ತಿದ್ದು, ಇಂದು ಪ್ರತಿಯೊಬ್ಬರೂ ವಿವಿಧ ರೀತಿಯ ತರಕಾರಿಗಳಿಗೆ ಮಾರು ಹೋಗಿದ್ದಾರೆ. ಭಾರತೀಯ ತರಕಾರಿ ಜಾಗತಿಕ ಮಟ್ಟದಲ್ಲಿ ಮಾರಾಟ ಆಗುವಂತಾಗಬೇಕೆಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ತೋಟಗಾರಿಕೆ ಸಂಶೋಧನಾ ವಿಸ್ತರಣಾ ಕೇಂದ್ರದಿಂದ ಮುಖ್ಯ ಆವರಣದಲ್ಲಿ ಹಮ್ಮಿಕೊಂಡ ಮೂರು ದಿನಗಳ ಕಾಲ ಸಸ್ಯ ಸಂತೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಂದು ತರಕಾರಿ ಬೆಳೆಗಳಲ್ಲಿ ಗ್ರಾಹಕರಿಗೆ ಆಕರ್ಷಣೆವಾಗುವ ಉದ್ದೇಶದಿಂದ ವಿಷಕಾರಿ ಔಷಧಿ ಉಪಯೋಗಿಸುವುದು ವಾಡಿಕೆಯಾಗಿದೆ. ಜವಾರಿ ಎನಿಸಿಕೊಂಡ ಜೋಳ ಕೂಡಾ ಇಂದು ಕಲಬರಕೆಯಾಗತೊಡಗಿದೆ. ಈ ಎಲ್ಲವುಗಳಿಂದ ಮುಕ್ತಗೊಳಿಸಿ ಸಾವಯವ ಕೃಷಿಯೊಂದಿಗೆ ತರಕಾರಿ ಬೆಳೆದು ಬೇರೆ ರಾಷ್ಟ್ರಕ್ಕೆ ರಫ್ತು ಮಾಡಲು ಎಲ್ಲ ವ್ಯವಸ್ಥೆಗಳು ನಮ್ಮಲ್ಲಿ ಇದ್ದಾಗ ಆ ಕಡೆ ಹೆಚ್ಚು ಗಮನ ಹರಿಸದೇ ಇರುವುದು ವಿಷಾಧನೀಯ ಸಂಗತಿಯಾಗಿದೆ ಎಂದರು.

ರೈತರು ಬೆಳೆದ ತರಕಾರಿ ಬೆಳೆದ ಸ್ಥಳದಲ್ಲಿಯೇ ಅದರ ಬೆಲೆ ತೂಕ, ಗುಣಮಟ್ಟ ಪರೀಕ್ಷೆಗೆ ಒಳಪಟ್ಟು ಯೋಗ್ಯದರ ದೊರೆಯುವಂತಾಗಿ ಬೆಳೆದ ಬೆಳೆಗ ನೇರವಾಗಿ ರೈತರಿಗೆ ಹಣ ವರ್ಗಾವಣೆ ಆಗುವಂತ ವ್ಯವಸ್ಥೆ ಆಗಬೇಕಿದೆ. ರೈತರು ಕೂಡಾ ಉತ್ಕೃಷ್ಟ ಹಾಗೂ ಸಾವಯವ ಕೃಷಿ ಪದ್ದತಿ ಬಳಸಿಕೊಂಡು ಕಲಬರಕೆ ರಹಿತ, ರಾಸಾಯನಿಕ ಬಳಸದ ತರಕಾರಿಗಳನ್ನು ಬೆಳೆಯಲು ಕರೆ ನೀಡಿದರು. ಅಲ್ಲದೇ ತೋಟಗಾರಿಕೆ ವಿಶ್ವವಿದ್ಯಾಲಯದ ಕಾರ್ಯ ಸಂತೃಪ್ತಿ ತಂದಿದ್ದು, ನಶಿಸಿ ಹೋಗುತ್ತಿರುವ ದೇಶಿ ತರಕಾರಿ ಹಾಗೂ ಹಣ್ಣುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕೆಂದು ತಿಳಿಸಿದರು.

ರಾಜ್ಯ ಸಭಾ ಸದಸ್ಯ ನಾರಾಯಣಸಾ ಬಾಂಡಗೆ ಮಾತನಾಡಿ ರಾಜ್ಯದಲ್ಲಿಯೇ ಪ್ರಥಮ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ಇದಾಗಿದ್ದು, ನಮ್ಮ ಭಾಗದ ರೈತರಿಗೆ ಉಪಯುಕ್ತವಾದ ಹಾಗೂ ವಿವಿಧ ತಳಿಗಳ ಸಂಶೋಧನೆಗಳೊಂದಿಗೆ ಮಾರ್ಗದರ್ಶನ ನೀಡುವ ಕಾರ್ಯವಾಗಬೇಕು ಎಂದರು.

ಪ್ರಾರಂಭದಲ್ಲಿ ತೋವಿವಿಯ ಕಿರಿಯ ಪ್ರಾಧ್ಯಾಪಕ ಡಾ.ವಸಂತ ಗಾಣಗೇರ ಅವರು ಸಸ್ಯ ಸಂತೆಯ ಮಳಿಗೆಗಳಲ್ಲಿ ಇರುವ ಲಿಂಬೆ, ಸೀತಾಫಲ, ನೆಲ್ಲಿ, ಚಿಕ್ಕು, ಮಾವು, ಪೇರು, ನೇರಳೆ, ಹುಣಸೆ, ಡ್ರ್ಯಾಗನ್ ಹೂವಿನ ಸಸಿಗಳು, ಔಷಧಿಯ ಸಸಿಗಳು, ಅಂಜುರ, ಸಿತಾಫಲ ಸೇರಿದಂತೆ ವಿವಿಧ ತಳಿಯ ಸಸಿಗಳು, ವಿಶ್ವವಿದ್ಯಾಲಯದ ಉದ್ದೇಶಿತ ಜೈವಿಕ ಗೊಬ್ಬರಗಳು, ಪೀಡೆನಾಶಕಗಳು, ರೈತ ಉತ್ಪಾದಕ ಜೇನು ಕೃಷಿಯ ತುಪ್ಪಗಳ ಸೂಕ್ತ ಮಾಹಿತಿಯೊಂದಿಗೆ ಪರಿಚಯ ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ತೋವಿವಿಯ ಕುಲಪತಿ ಡಾ.ವಿಷ್ಣುವರ್ಧನ, ಸಂಶೋಧನ ನಿರ್ದೇಶಕ ಡಾ.ಎಚ್.ಪಿ.ಮಹೇಶ್ವರಪ್ಪ, ವಿಸ್ತರಣಾ ನಿರ್ದೇಶಕ ಡಾ.ಲಕ್ಷ್ಮೀ ನಾರಾಯಣ ಹೆಗಡೆ, ಕುಲಸಚಿವರಾದ ಡಾ.ಟಿ.ಬಿ.ಅಳ್ಳೊಳ್ಳಿ, ಡೀನ್ ಡಾ.ರಾಮಚಂದ್ರ ನಾಯಕ, ಸಂಶೋಧನಾ ನಿರ್ದೇಶಕರಾದ ಡಾ.ಎಂ.ಎಸ್.ಲೋಕೇಶ, ಡಾ.ಆನಂದ, ಡಾ.ಸತೀಶ ಪಾಟಿ, ಡಾಶಶಿಕುಮಾರ, ಡಾ.ಎಚ್.ಎಂ.ಪಲ್ಲವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಾಧನೆ ಹಿಂದೆ ಗುರುವಿನ ಮಾರ್ಗದರ್ಶನ ಅಗತ್ಯ



ರಬಕವಿ-ಬನಹಟ್ಟಿ : ಬದುಕಿನಲ್ಲಿ ಯಾವುದೇ ಸಾಧನೆಯ ಹಿಂದೆ ಗುರುಗಳ ಮಾರ್ಗದರ್ಶನ ಜೀವನದುದ್ದಕ್ಕೂ ಅತ್ಯಗತ್ಯ. ಅದರಲ್ಲಿಯೂ ಬದುಕಿನ ಆರಂಭದ ಮೆಟ್ಟಿಲುಗಳನ್ನು ಕಲಿಸುವ ಶಿಕ್ಷಕರನ್ನು ಮರೆಯಲು ಅಸಾಧ್ಯವೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ಹೇಳಿದರು.

ಬನಹಟ್ಟಿಯ ನೀಲಕಂಠೇಶ್ವರ ಸಮುದಾಯ ಭವನದಲ್ಲಿ ನಡೆದ 1995-96 ನೇ ಸಾಲಿನ ಸರಕಾರಿ ಪ್ರೌಢಶಾಲೆಯ ಎಸ್.ಎಸ್.ಎಲ್. ಸಿ. ವಿದ್ಯಾರ್ಥಿಗಳ ಗುರುವಂದನಾ ಮತ್ತು ಸ್ನೇಹ ಸಂಗಮ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು. ರಬಕವಿ-ಬನಹಟ್ಟಿ ಸಾಹಿತಿಗಳ ತವರೂರು. ಇಲ್ಲಿ ಬ. ಗಿ. ಯಲ್ಲಟ್ಟಿ, ಈಶ್ವರ ಸಣಕಾಲ, ದು. ನಿಂ. ಬೆಳಗಲಿಯವರಂಥ ಸಾಹಿತಿಗಳು ನಗರದ ಕೀರ್ತಿ ಹೆಚ್ಚಿಸುವಲ್ಲಿ ಕಾರಣರಾದವರು. ಗುರುವಿನ ಮಾರ್ಗದರ್ಶನದಿಂದಲೇ ಎಲ್ಲವೂ ಸಾಧ್ಯವೆಂದು ಶರಣರು ತಿಳಿಸಿದರು.

ಆರ್.ಟಿ. ನಡುವಿನಮನಿ ಮಾತನಾಡಿ, ಶಿಷ್ಯ ಗುರುವನ್ನು ಮೀರಿಸುವಷ್ಟು ದೊಡ್ಡವರಾದಾಗ ಅದರಲ್ಲಿನ ಖುಷಿ ಮತ್ತೆಲ್ಲಿಯೂ ದೊರಕುವದಿಲ್ಲ. ಸಮಾಜದಲ್ಲಿ ಹಾಗು ದೇಶದಲ್ಲಿ ಗುರುವಿಗೆ ಪ್ರಾತಿನಿಧ್ಯ ನೀಡಿದ ಭಾರತ ಒಂದೇಯಾಗಿದೆ. ಅದಕ್ಕಾಗಿ ಗುರು ಪರಂಪರೆಯ ರಾಷ್ಟ್ರ ಭಾರತವೆಂದರು. ವೇದಿಕೆ ಮೇಲೆ ಬಿ. ಎ. ದೇಶಪಾಂಡೆ, ಬಿ. ಎಸ್. ಬಲತಿ, ಬಿ.ಎಸ್. ರಾಮತೀರ್ಥ, ಬಿ. ಎಸ್. ಮಿಳ್ಳಿ, ಎಂ. ಡಿ. ಪತ್ರಿ, ಕೆ. ಜಿ. ಉಮದಿ, ಆರ್. ಜಿ. ನಾವಿ, ಎಂ. ಆರ್. ರಾವಳ ಮುಂತಾದವರು ಉಪಸ್ಥಿತರಿದ್ದರು. ರಾಜು ಬಡಿಗೇರ, ಗುರು ಪೂಜಾರಿ, ಕಲ್ಯಾಣಿ ರಾವಳ, ದೀಪಕ ಜವಳಗಿ, ಅನೀಲ ಹುಲ್ಲೂರ, ಬಸು ಕೊಟ್ಟೂರ, ಭೀಮಶಿ ಹಂದಿಗುಂದ, ಮಲ್ಲಪ್ಪ ಗೌಡಪ್ಪನವರ, ದಾನಮ್ಮ ಗೊಬ್ಬಾಣಿ, ಶೈಲಾ ಸುಂಕದ, ರೂಪಶ್ರೀ ಕೋಪರ್ಡೆ, ಶಕುಂತಲಾ ಬಾವಲತ್ತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬಡ ವಿದ್ಯಾರ್ಥಿಗಳ ಆಶಾಕಿರಣ ರಬಕವಿಯ ಪರಿಸರ ಸ್ನೇಹಿ ಪಾಲಿಟೆಕ್ನಿಕ ಮಹಾವಿದ್ಯಾಲಯ

● ಕಿರಣ ಶ್ರೀಶೈಲ ಆಳಗಿ



**ರಬಕವಿ-ಬನಹಟ್ಟಿ:** ಬಾಗಲಕೋಟೆ ಜಿಲ್ಲೆಯ ರಬಕವಿ-ಬನಹಟ್ಟಿ ತಾಲೂಕಿನ ರಬಕವಿಯ ಸರಕಾರಿ ಪಾಲಿಟೆಕ್ನಿಕ್ ಮಹಾವಿದ್ಯಾಲಯ ತನ್ನ ಉತ್ತಮ ಪರಿಸರ ಸ್ನೇಹಿ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣದಿಂದ ಈ ಭಾಗದಲ್ಲಿ ಬಡವರ ಆಶಾ ಕಿರಣವಾಗಿ ಬೆಳೆದು ನಿಂತಿದೆ.

ನೇಕಾರಿಕೆಯನ್ನೇ ಮೂಲ ಕಸುಬನ್ನಾಗಿಸಿಕೊಂಡು ಬದುಕುತ್ತಿರುವ ತಾಲೂಕಿನ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಬಡ ಕೂಲಿ ನೇಕಾರರಿಗೆ ಈ ಪಾಲಿಟೆಕ್ನಿಕ್ ಮಹಾವಿದ್ಯಾಲಯ ವರದಾನವಾಗಿದೆ. 2009 ರಲ್ಲಿ ರಬಕವಿಯ ಸರ್ವೆ ನಂ. 8 ರಲ್ಲಿ ಸುಮಾರು ಏಳು ಎಕರೆ ಪ್ರದೇಶದಲ್ಲಿ ತಲೆ ಎತ್ತಿ ನಿಂತಿರುವ ತಾಂತ್ರಿಕ ಮಹಾವಿದ್ಯಾಲಯ ಸ್ವಚ್ಛ ಹಸಿರಿನ ವಾತಾವರಣದಲ್ಲಿ ವಿದ್ಯಾರ್ಥಿಗಳನ್ನು ತನ್ನೆಡೆಗೆ ಸೆಳೆಯುತ್ತಿದೆ.

ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಸಿವಿಲ್, ಕಂಪ್ಯೂಟ್ರ ಸೈನ್ಸ್, ಕ್ಲೌಡ ಕಂಪ್ಯೂಟಿಂಗ್ ಸೇರಿ ಒಟ್ಟು ಐದು ವಿಭಾಗಗಳನ್ನು ಹೊಂದಿದ್ದು , ಅತಿ ಕಡಿಮೆ ದರದಲ್ಲಿ ಡಿಪ್ಲೋಮಾ ಮಾಡಲು ಇಲ್ಲಿನ ಬಡ ಜನತೆಗೆ ಅನುಕೂಲವಾಗಿದೆ. ಒಟ್ಟು ಐದು ವಿಭಾಗಗಳಲ್ಲಿ 592 ಜನ ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿದ್ದು , 37 ಜನ ಶಿಕ್ಷಕರು, 16 ಜನ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಅರಣ್ಯ ಇಲಾಖೆಯ ಅಧಿಕಾರಿ ಮಲ್ಲು ನಾವಿ ಅವರ ಸಹಕಾರದಿಂದ ಇಲ್ಲಿ ನೆಟ್ಟಿರುವ ಸಸಿಗಳು ಈಗ ಹೆಮ್ಮರವಾಗಿ ಬೆಳೆದು ನಿಂತಿದ್ದು, ಕಾಲೇಜಿನ ಅಂದ ಚೆಂದವನ್ನು ಇನ್ನಷ್ಟು ಹೆಚ್ಚಿಸಿವೆ. ಅಲ್ಲದೇ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಅಡಿಯಲ್ಲಿ 'ಒಬ್ಬ ವಿದ್ಯಾರ್ಥಿ ಒಂದು ಗಿಡ ಬೆಳೆಸುವ' ಯೋಜನೆ ಹಾಕಿಕೊಂಡಿದ್ದು ಆ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ ಎನ್ನುತ್ತಾರೆ ಅಲ್ಲಿನ ಎನ್.ಎಸ್.ಎಸ್. ಅಧಿಕಾರಿ ಪ್ರಸಾದ ಮಾವರಕರ.

> "ಮಹಾವಿದ್ಯಾಲಯವು ಬಡ ವಿದ್ಯಾವಂತ ಮಕ್ಕಳಿಗೆ ಬಹಳಷ್ಟು ಅನುಕೂಲವಾಗಿದೆ.
>
> ◆ ವಿಠ್ಠಲ ಚಿಕ್ಕಲಕಿ
> ಪ್ರಾಚಾರ್ಯರು,
> ಸರಕಾರಿ ತಾಂತ್ರಿಕ ಮಹಾವಿದ್ಯಾಲಯ,
> ರಬಕವಿ.

ಇಲ್ಲಿ ಒಟ್ಟು ಮುನ್ನೂರಕ್ಕೂ ಅಧಿಕ ಗಿಡಗಳನ್ನು ನೆಡಲಾಗಿದ್ದು ಮುಂದಿನ ದಿನಮಾನಗಳಲ್ಲಿ ಕ್ಯಾಂಪಸ್ನ ಸುತ್ತ ಮುತ್ತಲೂ ಇನ್ನೂ ಹೆಚ್ಚಿನ ಗಿಡಗಳನ್ನು ಬೆಳೆಸಿ ಗ್ರೀನ್ ಕ್ಯಾಂಪಸ್ ಹಾಗೂ ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ ನಿರ್ಮಾಣಕ್ಕೆ ಯೋಜನೆ ಹಾಕಿ ಕೊಂಡಿರುವುದಾಗಿ ಪ್ರಾಚಾರ್ಯ ವಿಠ್ಠಲ ಚಿಕ್ಕಲಕಿ ಹೇಳುತ್ತಾರೆ. ಇಲ್ಲಿ ವಿದ್ಯಾರ್ಜನೆ ಪೂರೈಸಿರುವ ಶೇ. 90 ರಷ್ಟು ವಿದ್ಯಾರ್ಥಿಗಳು ಸಾಫ್ಟವೇರ್ ಮತ್ತು ಹಾರ್ಡವೇರ್ನಂತಹ ಮಲ್ಟಿ ನ್ಯಾಷನಲ್ ಕಂಪನಿಗಳಲ್ಲಿ ಉನ್ನತ ಹುದ್ದೆ ಹೊಂದಿದ್ದಾರೆ. ಕೆಲವೊಂದು ಜನ ಸ್ವಂತ ಕಂಪನಿಗಳನ್ನು ತೆರೆದಿದ್ದಾರೆ.




# ಸಾಹಿತಿ ಲತಾ ಕೆ.ಎಸ್. ಹೆಗಡೆ ಅವರಿಗೆ ಸನ್ಮಾನ

117ನೇ ರಾಷ್ಟ್ರಮಟ್ಟದ ಬೆಳಕು ಸಂಭ್ರಮ ಕಸಾಪದ ಅಕ್ಕಮಹಾದೇವಿ ಸಭಾಂಗಣದಲ್ಲಿ ಅದ್ದೂರಿಯಾಗಿ ನೆರವೇರಿತು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಕಲಾವಿದರು, ಗಾಯಕರು ಮತ್ತು ಸಾಹಿತಿಗಳು ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದ್ದರು. ಸಂಭ್ರಮದ ಸರ್ವಾಧ್ಯಕ್ಷರಾಗಿ ಶ್ರೀಮತಿ ಗೌರಿಶಂಕರ ಚಟ್ಟಿಯವರು ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಶ್ರೀಯುತ ಅಣ್ಣಪ್ಪ ಮೇಟಿಗೌಡ ಸಂಸ್ಥಾಪಕ ಅಧ್ಯಕ್ಷರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಮುಖ್ಯ ಅತಿಥಿಗಳಾಗಿ ಡಾ.ಮಹೇಂದ್ರ ಕುರ್ಡಿ, ಶ್ರೀಮತಿ ಲತಾ ಕೆ.ಎಸ್.ಹೆಗಡೆ, ಶ್ರೀ ಬಿ.ನಾಗೇಶ್, ಶ್ರೀಮತಿ ಮಾಲತಿಗೌಡ, ಮುಂತಾದವರು ವೇದಿಕೆಯ ಶೋಭೆ ಹೆಚ್ಚಿಸಿದರು.

ಇದೇ ಸಂದರ್ಭದಲ್ಲಿ ಕವಯತ್ರಿ, ಲೇಖಕಿ ಮತ್ತು ಸಾಮಾಜಿಕ ಚಿಂತಕಿ ಶ್ರೀಮತಿ ಲತಾ ಕೆ.ಎಸ್. ಹೆಗಡೆ ಅವರಿಗೆ ಗೌರವ ಸನ್ಮಾನ ನೀಡಿ ಅಭಿನಂದಿಸಲಾಯಿತು.

# ವಿಶ್ರಾಂತಿ ಮತ್ತು ಶಾಂತ ಭಾವನೆಗಾಗಿ ಯೋಗ: ಡಾ. ಪ್ರಹ್ಲಾದ್ ಗಂಗಾವತಿ



**ಬಾಗಲಕೋಟೆ :** ಮನಸ್ಸಿನ ಏಕಾಗ್ರತೆಯೊಂದಿಗೆ ದೇಹಕ್ಕೆ ವಿಶ್ರಾಂತಿ ಮತ್ತು ಶಾಂತ ಭಾವನೆ ಸಿಗಲು ಯೋಗ ಅವಶ್ಯಕ ಎಂದು ಡಾ. ಪ್ರಹ್ಲಾದ್ ಗಂಗಾವತಿ ತಿಳಿಸಿದರು.

ನಗರದ ಎಂ ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ನವನಗರ್ ಬಾಗಲಕೋಟೆ ಇವರ ಆಶ್ರಯದಲ್ಲಿ ನಡೆದ ಹತ್ತನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಹ್ಲಾದ್ ಗಂಗಾವತಿ ಮಾತನಾಡುತ್ತಾ ಭಾರತ ದೇಶದಷ್ಟೇ ಹಳೆಯದಾದ ಯೋಗವನ್ನ ನಾವೆಲ್ಲರೂ ಪ್ರತಿದಿನ ಅಳವಡಿಸಿಕೊಳ್ಳಬೇಕು. ಅಂದಾಗ ದೇಹಕ್ಕೆ ವಿಶ್ರಾಂತಿ ಮತ್ತು ಶಾಂತ ಭಾವನೆ ಲಭಿಸುತ್ತದೆ ಎಂದರು.

ನಿನ್ನೆಯ ದಿನ ಸಾಯಂಕಾಲ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳೊಂದಿಗೆ ಪ್ರಾಧ್ಯಾಪಕರು ಸೇರಿದಂತೆ ನಗರದ ಪ್ರಮುಖ ಕಡೆಗಳಲ್ಲಿ ಯೋಗಥಾನ್ ಜಾಥಾ ನಡೆಸಿದರು.

ಯೋಗ ದಿನಾಚರಣೆಯಲ್ಲಿ ಕಾಲೇಜಿನ ಡೀನ್/ ಆಡಳಿತ ಅಧಿಕಾರಿಯಾದ ಡಾ. ಶಿವಕುಮಾರ್ ಗಂಗಾಲ, ಸಿಬಿಎಸ್ ಸಿ ಯ ಪ್ರಾಂಶುಪಾಲರಾದ ಸಚಿನ್ ಬಾತ್ರಾ, ಪಿಯು ಕಾಲೇಜಿನ ಪ್ರಾಂಶುಪಾಲರಾದ ನಿವೃತ್ತ ಕ್ಯಾಪ್ಟನ್ ಶಶಾಂಕ್ ದೀಕ್ಷಿತ್, ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ ಡಾ. ವಿಜಯಕುಮಾರ್ ಚವಡಿ, ಡಾ. ಈಶ್ವರ್ ಪಾಟೀಲ್, ಡಾ. ದೀಪಾ ಗಂಗಾಲ, ಡಾ. ಅಶ್ವಿನಿ ಹೊಸಮನಿ, ಡಾ.ಅಂಜನಾ, ದೈಹಿಕ ಶಿಕ್ಷಕರಾದ ಸದಾಶಿವ ಹಂಚಿನಾಳ ಹಾಗೂ ಇನ್ನಿತರ ಪ್ರಾಧ್ಯಾಪಕ ವರ್ಗ ಜೊತೆಗೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನವಜಾತ ಶಿಶುವಿನ ಶವ ಪತ್ತೆ



**ವರದಿ:ಲಾಲಸಾಬ ಸವಾರಗೋಳ.**
**ವಿಜಯಪುರ :** ನಗರದಲ್ಲಿ ವಿದ್ಯಾರ್ಥಿನಿಯರು ವಾಸಿಸುವ ಮನೆಯ ಎದುರು ನವಜಾತ ಶಿಶುವಿನ ಶವ ಎಸೆದಿರುವ ವಿಲಕ್ಷಣ ಘಟನೆ ವರದಿಯಾಗಿದೆ. ನಗರದ ಚಾಲುಕ್ಯ ನಗರದಲ್ಲಿ ಕಾಲೇಜು ವಿದ್ಯಾರ್ಥಿನಿಯರು ಬಾಡಿಗೆ ರೂಮ್ ಮಾಡಿಕೊಂಡು ವಾಸವಿದ್ದಾರೆ. ಶನಿವಾರ ಸದರಿ ಮನೆ ಎದುರು ಆಗಷ್ಟೇ ಜನಿಸಿದ ನವಜಾತ ಶಿಶುವಿನ ಶವ ಕಂಡುಬಂದಿದೆ. ಬೆಳಿಗ್ಗೆ ಮನೆಯ ಬಾಗಿಲು ತೆರೆಯುತ್ತಿದ್ದಂತೆ ನವಜಾತ ಶಿಶುವಿನ ಶವ ಇರುವುದನ್ನು ಕಂಡ ವಿದ್ಯಾರ್ಥಿನಿಯರು ಆತಂಕಗೊಂಡಿದ್ದಾರೆ. ಶವವಾಗಿ ಪತ್ತೆಯಾಗಿರುವ ನವಜಾತ ಶಿಶುವಿನ ಕರುಳಬಳ್ಳಿ ಕತ್ತರಿಸಿ ಕ್ಲಿಪ್ ಹಾಕಿದ್ದು, ಆಸ್ಪತ್ರೆಯಲ್ಲಿ ಮಗು ಜನಿಸಿರುವ ಶಂಕೆ ವ್ಯಕ್ತವಾಗಿದೆ. ಮಗುವಿನ ದೇಹದ ಮೇಲೆ ಕಪ್ಪು ಕಲೆಗಳು ಕಂಡುಬಂದಿವೆ. ಘಟನೆಯ ಮಾಹಿತಿ ದೊರೆಯುತ್ತಲೇ ಸ್ಥಳಕ್ಕೆ ಭೇಟಿ ನೀಡಿರುವ ಆದರ್ಶ ನಗರ ಠಾಣೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

# ರೈತರ ಬದುಕು ಬದಲಿಸಲಿರುವ ಕಲ್ಲೋಳ ಬ್ಯಾರೇಜ್



**ಚಿಕ್ಕೋಡಿ :** ಸದಲಗಾ ಮತಕ್ಷೇತ್ರದ ಕಲ್ಲೋಳ ಮತ್ತು ಯಡೂರ ಗ್ರಾಮಗಳ ನಡುವೆ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಬ್ಯಾರೇಜ್ ಕಾಮಗಾರಿಯನ್ನು ಶಾಸಕ ಗಣೇಶ ಹುಕ್ಕೇರಿ ಭೇಟಿ ನೀಡಿ ವೀಕ್ಷಿಸಿದರು.

ನದಿ ತೀರದ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮಳೆನೀರು ಸಂಗ್ರಹಿಸಿ ಸುತ್ತಲಿನ ಪರಿಸರದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಅನುಕೂಲವಾಗಲೆಂದು ಒಟ್ಟು 32 ಕೋಟಿ ರೂ. ವೆಚ್ಚದಲ್ಲಿ ಬ್ಯಾರೇಜ್ ನಿರ್ಮಿಸಲಾಗುತ್ತಿದೆ ಹಾಗೂ ಅತೀ ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಶಾಸಕರು ಹೇಳಿದರು.

ಅಂದಾಜು 2 ಟಿ ಎಂ ಸಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಈ ಕಾಮಗಾರಿಯು ರೈತರ ಬದುಕು ಬದಲಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸದರಿ ಬ್ಯಾರೇಜ್ ಗೆ ಅತ್ಯಾಧುನಿಕ ಗೇಟ್ ಗಳನ್ನೂ ಅಳವಡಿಸಲಾಗುತ್ತಿದ್ದು, ಪೂರ್ಣಗೊಂಡ ಬಳಿಕ ಚಿಕ್ಕೋಡಿ ತಾಲೂಕಿನ ವಿವಿಧ ಏತ ನೀರಾವರಿ ಯೋಜನೆಗಳ ಫಲಾನುಭವಿಗಳಿಗೆ ವರದಾನವಾಗಲಿದೆ. ಬಿರು ಬೇಸಿಗೆ ಕಾಲದಲ್ಲಿಯೂ ಸಹ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಂತಹ ಸಾಕಷ್ಟು ನೀರು ಪೂರೈಸುವ ಯೋಜನೆಗಳ ಮೂಲಕ ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸಲು ಅನುಕೂಲವಾಗಲಿದೆ.

ಪ್ರತಿ ವರ್ಷ ಮಳೆಗಾಲ ಪ್ರಾರಂಭವಾದ ಕೆಲ ದಿನಗಳಲ್ಲಿಯೇ ಕಲ್ಲೋಳ - ಯಡೂರ ಸೇತುವೆ ಮುಳುಗಡೆಯಾಗುತ್ತಿದ್ದ ಕಾರಣ ನೂತನ ಸೇತುವೆಯ ಎತ್ತರವನ್ನು ಹೆಚ್ಚಿಸುತ್ತಿರುವುದರಿಂದ ನದಿ ತೀರದ ಜನರ ಸಂಚಾರಕ್ಕೆ ನೆರವಾಗಲಿದೆ.

ಈ ವೇಳೆ ಶಿವಾನಂದ ಕರೋಷಿ, ತೇಜು ಪಾಟೀಲ, ಯಾಸಿನ್ ನದಾಫ್, ಸಂಜು ಪಿರಾಜೇ, ಅಜಿತ ಕಿಲ್ಲೇದಾರ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.

ಪ್ರತಿ ವರ್ಷ ಬೇಸಿಗೆಯಲ್ಲಿ ನೀರಿನ ಪ್ರಮಾಣ ನಿರೀಕ್ಷೆಯಷ್ಟು ಸಿಗದ ಕಾರಣ ನದಿ ತೀರದ ಬೆಳೆಗಳು ನೀರಿಲ್ಲದೆ ಒಣಗುತ್ತವೆ. ಈ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯರು ಪ್ರಕಾಶ ಹುಕ್ಕೇರಿ ಹಾಗೂ ಶಾಸಕರಾದ ಗಣೇಶ ಹುಕ್ಕೇರಿ ಅವರ ಪ್ರಯತ್ನದಿಂದ ನಮ್ಮ ಕೃಷ್ಣಾ ನದಿಗೆ ಅಡ್ಡಲಾಗಿ ಬ್ಯಾರೇಜ್ ಕಾಮಗಾರಿ ಪ್ರಾರಂಭವಾಗಿ ಮುಕ್ತಾಯ ಹಂತದಲ್ಲಿರುವುದು ಸಂತಸ ತಂದಿದೆ. ಈ ಕಾಮಗಾರಿಯು ಪೂರ್ಣಗೊಂಡ ಬಳಿಕ ಅಂತರ್ಜಲ ಮಟ್ಟ ವೃದ್ಧಿಯಾಗಿ ರೈತಾಪಿ ವರ್ಗಕ್ಕೆ ಅನುಕೂಲವಾಗಲಿದೆ.

ಮಹೇಶ ಕಾಗವಾಡೆ, ಯಡೂರ ಗ್ರಾಮದ ರೈತ ಮುಖಂಡರು ಕಲ್ಲೋಳ ಹಾಗೂ ಯಡೂರ ಗ್ರಾಮಗಳ ಮಧ್ಯೆ ನಿರ್ಮಾಣವಾಗುತ್ತಿರುವ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಯನ್ನು ಶಾಸಕ ಗಣೇಶ ಹುಕ್ಕೇರಿ ಅವರು ವೀಕ್ಷಿಸಿದರು.

# ಸಿದ್ದರಾಮಯ್ಯ ರಾಜೀನಾಮೆ ನೀಡಿ ಚುನಾವಣೆ ಎದುರಿಸಲಿ: ಯತ್ನಾಳ್




**ವರದಿ:ಲಾಲಸಾಬ ಸವಾರಗೋಳ**
**ವಿಜಯಪುರ :** ರಾಜ್ಯದಲ್ಲಿ ಸಿದ್ಧರಾಮಯ್ಯ ಸರ್ಕಾರ ಬ್ರಿಟೀಷ್ ಮಾದರಿಯಲ್ಲಿ ತೆರಿಗೆ ಹೇರುತ್ತಿದೆ. ಬ್ರಿಟೀಷರು ಉಪ್ಪಿನ ಮೇಲೆ ತೆರಿಗೆ ಹೇರಿದಂತೆ ರಾಜ್ಯದ ಕಾಂಗ್ರೆಸ್ ಸರ್ಕಾರದಲ್ಲಿ ತೆರಿಗೆ ವಿಧಿಸುತ್ತಿದೆ. ಆಡಳಿತ ವೈಫಲ್ಯದ ಕಾರಣ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಸಿದ್ಧರಾಮಯ್ಯ ಚುನಾವಣೆ ಎದುರಿಸಬೇಕು ಎಂದು ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ ನಡೆಸಿದರು.

ಶನಿವಾರ ರಾಜ್ಯ ಸರ್ಕಾರದ ಇಂಧನ ದರ ಏರಿಕೆ ವಿರೋಧಿಸಿ ಬಿಜೆಪಿ ನಗರದ ಹೊರ ವಲಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ-50 ರಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿದ ಭರವಸೆಯಂತೆ ಗ್ಯಾರಂಟಿ ಯೋಜನಗಳನ್ನು ವಾಸ್ತವವಾಗಿ ಅನುಷ್ಠಾನ ಮಾಡುವಲ್ಲಿ ವಿಫಲವಾಗಿದೆ ಎಂದು ಕಿಡಿಕಾರಿದರು.

ಸರ್ಕಾರದ ಖಜಾನೆ ಖಾಲಿಯಾಗಿದ್ದರೂ ಈಗ ಗ್ಯಾರಂಟಿ ಬಂದ್ ಮಾಡಿದರೆ ಅಪಾಯ ಎಂದು ಮುಂದುವರೆಸಿದ್ದಾರೆ ಎಂದು ಕುಟುಕಿದ ಯತ್ನಾಳ, ಶಕ್ತಿ ಯೋಜನೆಯಿಂದ ಸಾರಿಗೆ ಇಲಾಖೆಗೆ ಲಾಭ ಎಂದು ಸಾರಿಗೆ ಸಂಸ್ಥೆಗಳ ಅಧಿಕಾರಿಗಳು ಹೇಳಿದ್ದಾರೆ. ಹಾಗಾದರೆ ಕೇವಲ ಮಹಿಳೆಯರಿಗೆ ಮಾತ್ರ ಗ್ಯಾರಂಟಿ ನೀಡಿದರೆ ಸಾಲದು. ಬಿಪಿಎಲ್ ಕಾರ್ಡ್ ಹೊಂದಿರುವ ಪುರುಷರಿಗೂ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡಲಿ ಎಂದು ಆಗ್ರಹಿಸಿದರು.

ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿ ತಿಂಗಳು ನಿಮ್ಮ ಅಕೌಂಟ್ಗೆ ಕಟಾ ಕಟಾ 8500 ರೂ. ಜಮೆ ಮಾಡುವುದಾಗಿ ಭರವಸೆ ನೀಡಿದ್ದರು. ಈಗ ಕಟಾ ಕಟಾ ಕೊಡ್ತಿರೋ ಇಲ್ಲಾ ಪಟಾ ಪಟ್ ಕೊಡಬೇಕೋ ಎಂದು ಮಹಿಳೆಯರು ರಾಹುಲ್ ಗಾಂಧಿಯನ್ನು ಕೇಳಬೇಕು ಎಂದು ಯತ್ನಾಳ ಹೇಳಿದರು.

ಅಭಿವೃದ್ಧಿಗೆ ಹಣ ಸಿಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ಗ್ಯಾರಂಟಿ ಯೋಜನೆಗಳ ವಿಷಯದಲ್ಲಿ ಅಸಮಾಧಾನ ಹೊರ ಹಾಕಿದ್ದಾರೆ. ಅಭಿವೃದ್ಧಿಗೆ ಹಣ ನೀಡಲಾಗದೆ ಆಡಳಿತ ಮಾಡಲಾಗಿದ್ದರೆ ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಮತ್ತೊಂದೆಡೆ ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಗಲು ದರೋಡೆಗೆ ಇಳಿದಿದೆ. ಸರ್ಕಾರದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಕಂದಾಯ ಸಚಿವರ ಕ್ಷೇತ್ರದಲ್ಲೇ ಕೋಟ್ಯಂತರ ರೂ. ಮೌಲ್ಯದ ಜಮೀನುಗಳನ್ನು ಅಕ್ರಮ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ್ದಾರೆ. ಇದರಲ್ಲಿ ಇಬ್ಬರು ಸಚಿವರೂ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಹಿಂದೂಗಳ ಹತ್ಯೆ ನಡೆಯುತ್ತಿದ್ದರೂ ಸಿದ್ಧರಾಮಯ್ಯ ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಕರ್ನಾಟಕದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲವಾಗಿದೆ ಎಂದು ಹರಿಹಾಯ್ದರು.

ಬಾಗಲಕೋಟೆ ಲೋಕಸಭಾ ಕ್ಷೇತ್ರಕ್ಕೆ ಗಜಕೇಸರಿ ಯೋಗ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮೂಲಕ ವ್ಯಾಪಾರಸ್ಥರಿಂದ ಹಣ ವಸೂಲಿ ಮಾಡಿದ್ದಾರೆ. ಈ ಅಕ್ರಮದ ತನಿಖೆ ನಡೆಸುವಂತೆ ನಾನು ಈಗಾಗಲೇ ಲೋಕಾಯುಕ್ತಕ್ಕೆ ಪತ್ರ ಬರೆದಿದ್ದೇನೆ. ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಕಬಳಿಸುವ ಜಾಲವನ್ನು ಸರ್ಕಾರ ಮಟ್ಟ ಹಾಕಬೇಕು. ಇಡೀ ಪ್ರಕರಣದ ಸಮಗ್ರ ತನಿಖೆ ನಡೆಯಬೇಕು ಎಂದು ಆಗ್ರಹಿಸಿದರು.

ವಾಲ್ಮೀಕಿ ನಿಗಮದಲ್ಲಿ ದಲಿತರಿಗೆ ಸೇರಬೇಕಿದ್ದ ಅನುದಾನದಲ್ಲಿ 187 ಕೋಟಿ ರೂ. ವಂಚಿಸಿ, ಹಗರಣ ಮಾಡಿದ್ದಾರೆ. ರಾಜ್ಯದ ಎಸ್ಟಿ ಜನರ ಅಭಿವೃದ್ಧಿಗೆ ಸೇರಬೇಕಿದ್ದ ಹಣ ಆಂಧ್ರದ ಬ್ಯಾಂಕ್ಗಳಲ್ಲಿ 18 ನಕಲಿ ಖಾತೆಗಳಿಗೆ ಜಮೆಯಾಗಿದೆ. ಚಿನ್ನ, ಪೆಟ್ರೋಲ್, ಪೆಟ್ರೋಲ್ ಬಂಕ್ ಮಾಲೀಕರ ಖಾತೆಗಳಿಗೆ ಹೋಗಿದೆ ಎಂದು ದೂರಿದರು.

ಪ್ರಧಾನಿಯಾಗಿದ್ದ ನೆಹರು ಅವರು 12 ಲಕ್ಷ ಎಕರೆ ಜಮೀನನನ್ನು ವಕ್ಫ್‌ಗೆ ಆಸ್ತಿ ಮಾಡಿದ್ದು, ನ್ಯಾಯಾಲಯಕ್ಕೆ ಹೋದರೂ ನ್ಯಾಯ ಸಿಗುವ ವಿಶ್ವಾಸವಿಲ್ಲ. ಹೀಗಾಗಿ ನಮಗೆ ನೆಹರು ಮಾದರಿ ಬೇಕಿಲ್ಲ, ಪ್ರಧಾನಿ ನರೇಂದ್ರ ಮೋದಿ ಯೋಜನೆ ಬೇಕು ಎಂದರು.

ವಿಜಯಪುರದಲ್ಲಿ ವಕ್ಫ್ ಆಸ್ತಿ ಕುರಿತು ಹೈಕೋರ್ಟ್ ಮೊರೆ ಹೋಗುತ್ತೇನೆ ಎಂದ ಯತ್ನಾಳ, ದೇಶದ ವಕ್ಫ್ ಹೆಸರಿನಲ್ಲಿರುವ ಆಸ್ತಿಯನ್ನು ಸರ್ಕಾರ ಬಡವರಿಗೆ ಹಂಚಬೇಕು. ಬಡವರಿಗೆ ನಿವೇಶನ ಮಾಡಿ ಹಂಚಬೇಕು, ಮನೆ ನಿರ್ಮಿಸಿ ಕೊಡಬೇಕು ಎಂದು ಆಗ್ರಹಿಸಿದರು.

ಸಂವಿಧಾನ ಬದಲಾವಣೆ ಇಲ್ಲ: ಬಿಜೆಪಿ ಸರ್ಕಾರ ಎಂದಿಗೂ ಸಂವಿಧಾನ ಬದಲಾವಣೆ ಮಾಡುವುದಿಲ್ಲ. ಸೂರ್ಯ-ಚಂದ್ರ ಇರುವವರೆಗೂ ಸಂವಿಧಾನ ಬದಲಾವಣೆ ಮಾಡದೇ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಾರ್ಗದಲ್ಲೇ ನಡೆಯುತ್ತೇವೆ ಎಂದು ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State